ಅಧ್ಯಕ್ಷರು :- ನಿನ್ನೆಯಿಂದ ಉದ್ಭವಿಸಿದ್ದ ವಿವಾದ ಬಹುಶಃ ಇಂದು ಮುಕ್ತಾಯದ ಹಂತದಲ್ಲಿದ್ದು ಶೇಕಡ 99ರಷ್ಟು ಭಾಗ ತೀರ್ಮಾನವಾಗಿರುತ್ತದೆ. ಆದುದರಿಂದ, ಈಗ ಸದನವನ್ನು ಮುಂದೂಡಿ ಪುನಃ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದು.

(ಸದನವು 12 ಗಂಟೆ 59 ನಿಮಿಷಕ್ಕೆ ಮುಂದೂಡಿ ಪುನಃ ಮಧ್ಯಾಹ್ನ 3.00ಗಂಟೆಗೆ ಸೇರುವುದೆಂದು ನಿಶ್ಚಯಿಸಿತು)

(ಸಭೆಯು ಮತ್ತೆ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಬಿ.ಆರ್. ಯಾವಗಲ್ :- ಮಾನ್ಯ ಅಧ್ಯಕ್ಷರೆ ಮಾನ್ಯ ವಿರೋಧ ಪಕ್ಷದ ನಾಯಕರು ಭಾಷಣ ಮಾಡುವಾಗ, xxx ಅನ್ ಪಾರ್ಲಿಮೆಂಟರಿ ಮಾತುಗಳನ್ನು ಹೇಳಿದ್ದಾರೆ. ಅದು ನಮಗೆ ಅನ್ವಯವಾದರೆ ಕೇಂದ್ರ ಸರ್ಕಾರದವರು ಇವರನ್ನು ಛೂ ಬಿಟ್ಟಿದ್ದಾರೆಯೇ ಎಂದು ಕೇಳಬೇಕಾಗುತ್ತದೆ.

ಅಧ್ಯಕ್ಷರು :- ಅದು ಅನ್‌ಪಾರ್ಲಿಮೆಂಟರಿಯಾಗಿದ್ದರೆ ನಾನು ಅದನ್ನು ತೆಗೆಸಿಹಾಕಲು ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ನಾನು ಕಡತವನ್ನು ತರಿಸಿ ನೋಡುತ್ತೇನೆ.

2. ಆಡಳಿತ ಪಕ್ಷದ ಸದಸ್ಯರು ಬಾಯಿಯಲ್ಲಿ ಬಂದು ಧರಣಿ ಮಾಡಿರುವುದರ ಬಗ್ಗೆ ಚರ್ಚೆ.

+ಶ್ರೀ ಜಗದೀಶ್‌ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಯಾವುದು ಅನ್‌ಪಾರ್ಲಿಮೆಂಟರಿ, ಯಾವುದು ಅಲ್ಲ ಎಂಬುದನ್ನು ತಿಳಿದುಕೊಂಡೇ ನಾವು ಮಾತನಾಡುವುದು. ಪಾರ್ಲಿಮೆಂಟರಿ ಪದ್ಧತಿಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಅವರಿಗೆ ನಿನ್ನೆಯೇ ಗೊತ್ತಿದ್ದರೆ ಈ ಪರಿಸ್ಥಿತಿ ಬರುತ್ತಲೇ ಇರಲಿಲ್ಲ. ರೈತರ ಉತ್ಪನ್ನಗಳ ಬೆಲೆ ಕುಸಿತವಾಗಿರುವ ಈ ಸಂದರ್ಭದಲ್ಲಿ ಅದರ ಬಗ್ಗೆ ನಿಲುವಳಿ ಸೂಚನೆಯನ್ನು ತಂದು ಸುದೀರ್ಘವಾದ ಚರ್ಚೆ ಮಾಡಬೇಕು ಆ ಮುಲಕ ರೈತರ ಆ ಗಂಭೀರವಾದ ಸಮಸ್ಯೆಗೆ ಪರಿಹಾರವನ್ನು ಹುಡುಕಬೇಕು ಎಂದು ನಾವು ನಿನ್ನೆಯಿಂದ ಪ್ರಯತ್ನ ಮಾಡುತ್ತಿದ್ದರೆ ನಿನ್ನೆಯ ಘಟನಾವಳಿಗಳು ಅದಕ್ಕೆ ಅವಕಾಶವನ್ನು ಕೊಡಲಿಲ್ಲ. ಇಲ್ಲಿ ರೈತರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬಾರದು, ರಾಜ್ಯ ಸರ್ಕಾರದ ವೈಫಲ್ಯವೇನಾಗಿದೆ ಅದು ಎಕ್ಸ್‌ಪೋಸ್ ಆಗಬಾರದು ಎಂಬ ದೃಷ್ಟಿಯಿಂದ ಬಹುಶಃ ನಿನ್ನೆ ಇದರ ಬಗ್ಗೆ ಚರ್ಚೆಗೆ ಅಡೆತಡೆಯಾಗಿರಬಹುದು. ನಿನ್ನೆಯ ಘಟನಾವಳಿಯ ಬಗ್ಗೆ ನಾವು ನಿನ್ನೆಯಿಂದಲೂ ಪ್ರಸ್ತಾಪ ಮಾಡಿಕೊಂಡು ಬಂದಿದ್ದೇವೆ, ಮಾನ್ಯ ಕಾನೂನು ಸಚಿವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರೆ ಬಹುಶಃ ಇದು ಈ ಹಂತಕ್ಕೆ ಬರುತ್ತಿರಲಿಲ್ಲ. ಈಗಲೂ ಇದರ ಬಗ್ಗೆ ಹೇಳಿಕೆ ಕೊಡಲು ಸಮಯ ಮಿಂಚಿಲ್ಲ. ಇವತ್ತು ರಾಜ್ಯದ ಎಲ್ಲ ಕಡೆಗಳಿಂದಲೂ ಬಿ.ಜೆ.ಪಿ. ಪಕ್ಷದ ನೇತೃತ್ವದಲ್ಲಿ

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ

ಲಕ್ಷಾಂತರ ಜನ ರೈತರು ಇಲ್ಲಿಗೆ ಬಂದು ಧರಣಿ ಮಾಡಿ ರಾಜ್ಯ ಸರ್ಕಾರದ ವಿರುದ್ಧ ತಮ್ಮ ಆಕ್ರೋಶವನ್ನು ತೋಡಿಕೊಂಡಿದ್ದಾರೆ. ರಾಜ್ಯ ಸರ್ಕಾರ ಹೇಗೆ ನಡೆಯುತ್ತಿದೆ ಎಂಬ ಬಗ್ಗೆ ತೀರ್ಪನ್ನು ಕೊಡುತ್ತಿದ್ದಾರೆ.

ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):- ಜನರು ನಮ್ಮ ಕಡೆ ಇದ್ದಾರೆ ನೀವೇ ನಮ್ಮ ವಿರೋಧವಾಗಿರುವವರು.

ಶ್ರೀ ಜಗದೀಶ್ ಶೆಟ್ಟರ್:- ರಾಜ್ಯ ಸರ್ಕಾರ ಯಾವ ರೀತಿ ಆಡಳಿತವನ್ನು ನಡೆಸುತ್ತಿದೆ, ಗ್ರಾಮಾಂತರ ಪ್ರದೇಶದ ಜನರನ್ನು ಯಾವ ರೀತಿಯಲ್ಲಿ ನಿರ್ಲಕ್ಷ್ಯ ಮಾಡುತ್ತಿದೆ ಎಂಬ ಬಗ್ಗೆ ರಾಜ್ಯಾದ್ಯಂತ ಲಕ್ಷಾಂತರ ರೈತರು ರಾಜಧಾನಿಗೆ ಬಂದು ಮುಖ್ಯಮಂತ್ರಿಯವರಿಗೆ ಧರಣಿಯ ಮೂಲಕ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ರೈತರ ವಿಚಾರದಲ್ಲಿ ಹೆಚ್ಚಾಗಿ ಚರ್ಚೆಯಾಗಿ ಅವರ ಈ ಸಮಸ್ಯೆಗಳು ನಿವಾರಣೆಯಾಗುವ ನಿಟ್ಟಿನಲ್ಲಿ ಕೆಲಸ ಆಗಬೇಕಾಗಿದೆ. ಸರ್ಕಾರ ಎಲ್ಲಿ ತಪ್ಪು ಮಾಡುತ್ತಿದೆ ಅದನ್ನು ತಿದ್ದುವ ಕೆಲಸವಾಗಬೇಕಾಗಿವೆ. ರೈತರ ಬಗ್ಗೆ ಚರ್ಚೆಗೆ ಅವಕಾಶವಿಲ್ಲದಂಥ ವಾತಾವರಣವೇನು ನಿರ್ಮಾಣವಾಯಿತು ಅದರ ಬಗ್ಗೆ ಮುಖ್ಯಮಂತ್ರಿಯವರು, ಕಾನೂನು ಸಚಿವರು ನಿನ್ನೆಯೇ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಮಾತನಾಡಿದ್ದರೆ ಇದು ಆಗುತ್ತಿರಲಿಲ್ಲ. ನಿನ್ನೆ ಆದಂಥ ಘಟನಾವಳಿಯ ಬಗ್ಗೆ ಮಾನ್ಯ ಚಂದ್ರೇಗೌಡರು ಬೆಳಕನ್ನು ಚೆಲ್ಲುತ್ತಾರೆ ಎಂಬ ಭಾವನೆ ನಮಗಿದೆ. ಇದರಿಂದ ಅಧ್ಯಕ್ಷರ ಪೀಠಕ್ಕೂ ಅಗೌರವವಾಗಿದೆ, ಇದರಲ್ಲಿ ಸದನದ ಗೌರವದ ಪ್ರಶ್ನೆಯೇ ಅಡಗಿದೆ, ಆದ್ದರಿಂದ ಇದರ ಬಗ್ಗೆ ಅವರಿಂದ ನಿರ್ದಿಷ್ಟವಾದ ಹೇಳಿಕೆ ಬರಬೇಕು. ಮಾನ್ಯ ಸದಸ್ಯರುಗಳಿಂದ ನಿನ್ನೆಯ ಘಟನೆಯಿಂದ ತಮ್ಮ ಪೀಠಕ್ಕೆ ಏನು ಅಪಮಾನವಾಗಿದೆ ಅದರ ಬಗ್ಗೆ ಸರ್ಕಾರದಿಂದ ಕ್ಷಮಾಪಣೆ ವಿಷಾದದ ಬಗ್ಗೆ ಹೇಳಿಕೆ ಬರಬೇಕೆಂದು ನಿನ್ನೆಯಿಂದಲೂ ನಾವು ಒತ್ತಾಯ ಮಾಡುತ್ತಿದ್ದೇವೆ. ಆದ್ದರಿಂದ, ಇದರ ಬಗ್ಗೆ ಸರ್ಕಾರದಿಂದ ಹೇಳಿಕೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ಸಿ.ಭೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಈ ಸದನದಲ್ಲಿ ನಿಜವಾಗಿಯೂ ನಷ್ಟವಾಗಿರುವುದು ನಮಗೆಯೇ. ನಮ್ಮ ಪಕ್ಷಕ್ಕೆಯೇ. ಈ ಸದನವಿರುವುದು ರಾಜ್ಯದ ಜನತೆಯ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ. ಆದರೆ ನ ನಿನ್ನೆಯಿಂದ ಈ ಎಲ್ಲ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ಇಲ್ಲಿ ಅವಕಾಶವೇ ಸಿಗಲಿಲ್ಲ. ರಾಜ್ಯದಲ್ಲಿರುವ 70 ಭಾಗ ರೈತರ ಸಮಸ್ಯೆಗಳ ಬಗ್ಗೆ ನಾವು ಕಳೆದ ಅಧಿವೇಶನದಲ್ಲೂ ಚರ್ಚೆ ಮಾಡಿದ್ದೇವೆ, ಅಲ್ಲಿಂದ ರೈತರ ಪರಿಸ್ಥಿತಿ ಉತ್ತಮಗೊಂಡಿದೆಯೆಂದು ನಾವೇನು ಭಾವಿಸುತ್ತಿದ್ದೆವೋ, ಹಾಗೆ ಅವರ ಪರಿಸ್ಥಿತಿ ಏನೂ ಉತ್ತಮಗೊಳ್ಳಲಿಲ್ಲ, ಅದಕ್ಕೆ ಬದಲಾಗಿ ಅವರ ಸಮಸ್ಯೆ ಇನ್ನೂ ಭೀಕರವಾಗುತ್ತಿರುವುದನ್ನು ರಾಜ್ಯಾದ್ಯಂತ ನಾವು ನೋಡುತ್ತಿದ್ದೇವೆ. ಆದ್ದರಿಂದ, ರೈತರ ಸಮಸ್ಯೆಗಳ ಬಗ್ಗೆ ಇಲ್ಲಿ ಮುಖ್ಯವಾಗಿ ಚರ್ಚೆಯಾಗಬೆಕಾಗಿದೆ. ಆದರೆ ದಿಢೀರಾಗಿ ಆಡಳಿತ ಪಕ್ಷದ ಸದಸ್ಯರು ತಮ್ಮ ಎದುರು ಬಂದು ಬಾವಿಯಲ್ಲಿ ಧರಣಿ ಮಾಡಿದ್ದು ಅದನ್ನು ವಿರೋಧಿಸಿ ನಮ್ಮ ಬಿಜೆಪಿ ಸದಸ್ಯರು ಘೋಷಣೆ ಕೂಗತಕ್ಕದ್ದು, ಇದರ ಒಟ್ಟಾರೆ ಫಲಿತಾಂಶ ಇರತಕ್ಕ ಸಮಸ್ಯೆಗೆ ಪ್ರಾಮುಖ್ಯತೆ ಬರಲಿಲ್ಲ. One

menship ಎನ್ನತಕ್ಕ ರೀತಿಯಲ್ಲಿ ಸಭೆಯನ್ನು ನಡೆದಿದೆ. ಆದರೆ, ನಾವು ಇದನ್ನು ಮೂಖ ಪ್ರೇಕ್ಷಕರಾಗಿ ನೋಡುತ್ತಿದ್ದೇವೆ. ಈ ರೀತಿಯಾದ ನಡವಳಿಕೆಗೆ ನಾವು ಭಾಗಿಯಾಗುವುದಿಲ್ಲವೆಂಬ ಮಾತನ್ನು ವಿಧಾನಸಭೆ ಪ್ರಾರಂಭವಾದ ಸಮಯದಲ್ಲೇ ನಾವು ಹೇಳಿದ್ದೇವೆ. ನಾವೂ ಆಡಳಿತವನ್ನು ನಡೆಸಿದ್ದೇವೆ. ಮುಂದೆ ಆಡಳಿತವನ್ನು ನಡೆಸುವವರಿದ್ದೇವೆ, ಆ ಕಾರಣದಿಂದ ನಾವು ಬೇರೆಯವರಿಗೆ ಅನುಕರಣೀಯವಾಗಿರಬೇಕು ಮತ್ತು ಸದನಕ್ಕಿರುವ ಪರಂಪರೆಗೆ ವಿರುದ್ಧವಾಗಿ ನಮ್ಮ ನಡವಳಿಕೆ ಇರಬಾರದು ಎಂಬ ಕಾರಣಕ್ಕಾಗಿ ನಾವು ಧರಣಿ ಮಾಡುವ ಮೂಲಕ ಬಾವಿಯಲ್ಲಿ ಕೂರಲು ಹೋಗಲಿಲ್ಲ. ನಮಗೆ ಸಮಸ್ಯೆ ಏನು ಎಂಬುದು ಮುಖ್ಯ. ಆ ಸಮಸ್ಯೆಯನ್ನು ಮರೆಮಾಚುವ ಪ್ರಯತ್ನ ಇವತ್ತು ನಡೆದಿದೆ. ಈ ರೀತಿಯಾದ ಧರಣಿ ಇವತ್ತೇ ನಡೆಯುತ್ತಿಲ್ಲ, ಹಿಂದೆ ಅನೇಕ ಸಂದರ್ಭಗಳಲ್ಲಿ ನಡೆದಿದೆ. ನಾವೂ ಸಹ ವಿರೋಧ ಪಕ್ಷದಲ್ಲಿದ್ದಾಗ ಒಂದೆರಡು ಸಲ ಧರಣಿ ಮಾಡಿದ್ದೇವೆ. ನಾವು ಈ ಸ್ಥಾನದಲ್ಲಿ ಕುಳಿತು ಸರ್ಕಾರಕ್ಕೆ ಏನಾದರೂ ಸಲಹೆಯನ್ನು ಕೊಟ್ಟಾಗ, ಈ ರೀತಿಯಾಗಿಯೇ ಮಾಡಬೇಕೆಂದು ನಾವು ಸರ್ಕಾರವನ್ನು ಒತ್ತಾಯ ಮಾಡಿದಾಗ, ಅದಕ್ಕೆ ಸರ್ಕಾರ ಹಿಂದೇಟು ಹಾಕಿದಾಗ, ಒಪ್ಪದಿದ್ದ ಸಂದರ್ಭದಲ್ಲಿ ಅದನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತೇವೆ ಎಂದು ಹೇಳತಕ್ಕದ್ದು, ಅದಕ್ಕೂ ಆಡಳಿತ ಪಕ್ಷದವರು, ಸರ್ಕಾರ ಜಗ್ಗಲಿಲ್ಲವೆಂದರೆ ಕೊನೆಯದಾಗಿ ಬಾವಿಯಲ್ಲಿ ಬಂದು ಧರಣಿ ಮಾಡುವುದು ಪದ್ಧತಿ. ಇವತ್ತು ಆಡಳಿತಪಕ್ಷದ ಸದಸ್ಯರು ಬಾವಿಯಲ್ಲಿ ಧರಣಿ ಮಾಡುವುದಕ್ಕೆ ಬಂದು ಆ ಪ್ರತಿಭಟನೆಗೆ ಅವರೇ ಮೂಲ ಕಾರಣ. ಯಾರ ಮೇಲೆ ಪ್ರತಿಭಟನೆ? ಒಂದು, ಸರ್ಕಾರದ ಮೇಲೆ ಆಗಿರಬೇಕು. ಇಲ್ಲದಿದ್ದರೆ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದ್ದೇವೆ ಅದಕ್ಕಾಗಿ ಇಲ್ಲಿ ಬಂದು ಧರಣಿ ಮಾಡಿದ್ದೇವೆಂದು ಅವರು ಹೇಳಬೇಕಾಗುತ್ತದೆ. ಇಲ್ಲ ತಾವು ಸದನವನ್ನು ಸರಿಯಾಗಿ ನಡೆಸಲಿಲ್ಲವೆಂದು ತಮ್ಮ ವಿರುದ್ಧ ಪ್ರತಿಭಟನೆ ಮಾಡಬೇಕಾಗುತ್ತದೆ. ಇಲ್ಲ ತಾವು ಸದನವನ್ನು ಸರಿಯಾಗಿ ನಡೆಸಲಿಲ್ಲವೆಂದು ತಮ್ಮ ವಿರುದ್ಧ ಪ್ರತಿಭಟನೆ ಮಾಡಬೇಕಾಗುತ್ತದೆ. ಆಡಳಿತ ಪಕ್ಷದ ಸದಸ್ಯರುಗಳು ಏತಕ್ಕೆ ಇಲ್ಲಿ ಗೆ ಬಂದು ಧರಣಿ ಮಾಡಿದರು ಎಂಬುದು ನಮಗಂತೂ ಗೊತ್ತಿಲ್ಲ. ಹೊರಗಡೆ ನೂರೆಂಟು ಹೇಳಬಹುದು. ಅವರು ಯಾವ ಕಾರಣಕ್ಕಾಗಿ ಇಲ್ಲಿ ಧರಣಿ ಮಾಡುವುದಕ್ಕೆ ಬಂದರು ಎಂಬುದು ಸದನದ ಕಡತದಲ್ಲಿ ಇಲ್ಲ. ಆದರೆ, ನಾವು ಅರ್ಥ ಮಾಡಿಕೊಂಡಿರುವುದೇನೆಂದರೆ, ರಾಜ್ಯ ಸರ್ಕಾರದ ವಿರುದ್ಧ ಆಡಳಿತ ಪಕ್ಷದ ಸದಸ್ಯರೇ ಪ್ರತಿಭಟನೆ ಮಾಡುವಂಥ ಮಟ್ಟಕ್ಕೆ ರಾಜ್ಯದ ರೈತರ ಪರಿಸ್ಥಿತಿ ತಲುಪಿದೆ. ಜೋಳವನ್ನು ಕೊಂಡುಕೊಳ್ಳಲಿಲ್ಲ ಎಂಬ ಸಮಸ್ಯೆ ಇಲ್ಲವೆಂದು ಹೇಳುತ್ತಿಲ್ಲ, ಆ ಭೀಕರವಾದ ಸಮಸ್ಯೆಯನ್ನು ಆಡಳಿತ ಪಕ್ಷದ ಸದಸ್ಯರೇ ಪ್ರತಿಭಟನೆ ಮಾಡುವುದಕ್ಕೆ ಹೋಗಿದ್ದಾರೆ ಎಂಬುದು ಉಚಿತವಲ್ಲ ಎಂಬುದನ್ನು ಹೇಳುವುದಕ್ಕೆ ಬಯಸುತ್ತೇನೆ. ಆಡಳಿತ ಪಕ್ಷದ ಸದಸ್ಯರು ಬಾವಿಗೆ ಬಂದಿರತಕ್ಕದ್ದು ಇದು ಎರಡನೆಯ ಸಲುವಾಗಿದೆ. ಇದು ಸರಿಯಾದ ವರ್ತನೆಯಲ್ಲವೆಂಬುದನ್ನು ಹೇಳಲೇಬೇಕಾಗುತ್ತದೆ. ರಾಜ್ಯ ಸರ್ಕಾರದ ವಿರುದ್ಧ ಅವರು ಬಂದರೆ, ಕೇಂದ್ರ ಸರ್ಕಾರದ ವಿರುದ್ಧವೆಂದು ಅವರು ಹೇಳಬಹುದು, ಆದರೆ ಅವರು ಅವರ ಸ್ಥಾನದಲ್ಲಿ ಕುಳಿತು ಚರ್ಚೆ ಮಾಡಲು ಅವಕಾಶವಿದೆ, ಇದು ಚರ್ಚೆಗಾಗಿ ಮೀಸಲಾಗಿರುವ ಸದನ. ಜನರ ಸಮಸ್ಯೆಯ ಬಗ್ಗೆ ಚರ್ಚೆ ಮಾಡಿ ಬಗೆಹರಿಸುವುದಕ್ಕೋಸ್ಕರ

ನಾವು ಇಲ್ಲಿಗೆ ಬಂದಿದ್ದೇವೆ. ಸಭೆಯ ನಡವಳಿಕೆಗಳನ್ನು ಅಡ್ಡಿಪಡಿಸಲು ನಾವು ಇಲ್ಲಿಗೆ ಬಂದಿಲ್ಲ. ಅವರೊಬ್ಬರ ಬಗ್ಗೆ ಮಾತ್ರ ನಾನು ಹೇಳುತ್ತಿಲ್ಲ, ಎಲ್ಲರನ್ನೂ ಕುರಿತು ಇದನ್ನು ಹೇಳುತ್ತಿದ್ದೇನೆ. ಇವತ್ತು ಕರ್ತವ್ಯ ಚ್ಯುತಿಯಾಗಿದೆ. ಎಂಬುದನ್ನು ಬಹಳ ದುಃಖದಿಂದ ಹೇಳಬಯಸುತ್ತೇನೆ. ಈ ರೀತಿಯಾದ ವರ್ತನೆ ಸರಿಯಲ್ಲವೆಂದು ಇದನ್ನು ಖಂಡಿಸುತ್ತೇನೆ. ವಿರೋಧ ಪಕ್ಷದ ನಾಯಕರೇನು ಹೇಳಿದ್ದಾರೆ ಅದರ ಪ್ರಕಾರ ಇದರ ಬಗ್ಗೆ ಸರ್ಕಾರದಿಂದ ಹೇಳಿಕೆ ಬರಬೇಕಾಗುತ್ತದೆ. ನಮ್ಮ ರಕ್ಷಣೆಗೂ ತಾವು ಬರಬೇಕಾಗುತ್ತದೆ. ಸರ್ಕಾರದಿಂದ ಸಕಾರಾತ್ಮಕವಾದ ಹೇಳಿಕೆಯು ಇದರ ಬಗ್ಗೆ ಬರಬೇಕಾಗುತ್ತದೆ. ಆಡಳಿತ ಪಕ್ಷದಲ್ಲಿರುವವರು ಯಾವಾಗಲೂ ಸೌಜನ್ಯತೆಯನ್ನು ತೋರಿಸಬೇಕಾಗುತ್ತದೆ, ತಗ್ಗಿಬಗ್ಗಿ ನಡೆಯಬೇಕಾಗುತ್ತದೆ. ದಿಢೀರಾಗಿ ಬಂದು ಬಾವಿಯಲ್ಲಿ ಬೀಳುವುದು ಆಡಳಿತ ಪಕ್ಷ ಲಕ್ಷಣವಲ್ಲ. ನಾವೂ ಮೂರು ಸಲ ಸರ್ಕಾರವನ್ನು ನಡೆಸಿದ್ದೇವೆ, ಆದರೆ ನಾವು ಯಾವಾಗಲೂ ಆ ರೀತಿ ಕೆಲಸವನ್ನು ಮಾಡಲಿಲ್ಲ. ಈ ಸದನದಲ್ಲಿ ಮಧುರವಾದ ವಾತಾವರಣವನ್ನು ನಿರ್ಮಾಣ ಮಾಡಿಕೊಡಬೇಕಾಗಿರತಕ್ಕದ್ದು; ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿರತಕ್ಕದ್ದು ಆಡಳಿತ ಪಕ್ಷದ ಕರ್ತವ್ಯ ಆ ಕೆಲಸವನ್ನು ಮಾಡಬೇಕು ಎಂಬುದನ್ನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಈಗಾಗಲೇ ಬೆಕಾದಷ್ಟು ಸಮಯ ನಾವು ಕಳೆದಿದ್ದೇವೆ. ಮಾನ್ಯ ಯಾವಗಲ್‌ರವರು ಅನಂತರ ಮಾನ್ಯ ಸಿಂಧ್ಯಾರವರು ಮಾತನಾಡಲಿ. ಅನಂತರ ಅದಕ್ಕೆ ಮಾನ್ಯ ಚಂದ್ರೇಗೌಡರು ಉತ್ತರ ಕೊಟ್ಟುಬಿಡಲಿ.

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ಇಲ್ಲಿ ಏನೊಂದು ಘಟನೆಗಳು ನಡೆಯುತ್ತಿವೆಯೋ ಅದನ್ನು ನಮ್ಮ ಹಿರಿಯರಾದ ಮಾನ್ಯ ವಿರೋಧ ಪಕ್ಷದ ಸದಸ್ಯರು ಬಹಳ ತಾಂತ್ರಿಕವಾಗಿ ನೋಡುತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ....

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು:- ದಯಮಾಡಿ ಮಾನ್ಯ ಯಾವಗಲ್‌ರವರು ಹೇಳುವುದನ್ನು ಕೇಳಿ ತಮ್ಮ ನಾಯಕರು ಮಾತನಾಡುವಾಗ ಆಡಳಿತ ಪಕ್ಷದವರು ಗಲಾಟೆ ಮಾಡಿಲ್ಲ. ಆದ್ದರಿಂದ ನೀವೂ ಕೂಡ ಗಲಾಟೆ ಮಾಡಬೇಡಿ. ಅವರು ಎರಡು ನಿಮಿಷ ಮಾತನಾಡಲು ನೀವು ಅವಕಾಶ ಮಾಡಿಕೊಡಿ. ಅವರು ಮಾತನಾಡಲು ಅಡ್ಡಿಪಡಿಸಬೇಡಿ, ಸುಮ್ಮನೆ ಇರಿ

(ಗೊಂದಲ)

(ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಬಿ.ಆರ್. ಯಾವಗಲ್:- ನಮ್ಮ ಹಕ್ಕನ್ನು ಕಸಿದುಕೊಳ್ಳಲಿಕ್ಕೆ ಇವರು ಯಾರು?....

(ಗೊಂದಲ)

MR.SPEAKER :- It is unfair. Once again I have to adjourn the House.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ - ಈ ಸದನದಲ್ಲಿ ಮಾತನಾಡುವುದು ಪ್ರತಿಯೊಬ್ಬ ಸದಸ್ಯರ ಹಕ್ಕಾಗಿದೆ. ಮಾನ್ಯ ಅಧ್ಯಕ್ಷರ ಯಾವಗಲ್‌ರವರನ್ನು ಮಾತನಾಡಲಿಕ್ಕೆ ಕರೆದಿದ್ದಾರೆ. ಅವರು ಮಾತನಾಡಲಿಕ್ಕೆ ಏಕೆ ಪ್ರತಿಭಟನೆ ಮಾಡುತ್ತಿದ್ದೀರಿ ? ಜನರ ಸಮಸ್ಯೆಗಳನ್ನು ಪ್ರಸ್ತಾಪಿಸಲು ಬಿ.ಜೆ.ಪಿ.ಯವರಿಗೆ ಗುತ್ತಿಗೆ ಕೊಟ್ಟಿಲ್ಲ. ಎಲ್ಲಾ ಪಕ್ಷದವರೂ ಕೂಡ ಜನರ ಸಮಸ್ಯೆಗಳಿಗೆ ಸ್ಪಂದಿಸಲಿಕ್ಕೇ ಇಲ್ಲಿಗೆ ಬಂದಿದ್ದಾರೆ.

ಅಧ್ಯಕ್ಷರು:- ಮಾನ್ಯ ಯಾವಗಲ್‌ರವರೇ, ಬೇಗ ತಾವು ಮಾತನಾಡುವುದನ್ನು ಮುಗಿಸಿ.

ಶ್ರೀ ಬಿ. ಆರ್. ಯಾವಗಲ್ (ನರಗುಂದ):- ಮಾನ್ಯ ಅಧ್ಯಕ್ಷರೇ, ಬಹಳ ತಾಂತ್ರಿಕವಾಗಿ ಇದನ್ನು ನೋಡುತ್ತಿದ್ದಾರೆ ಎಂದುನನ್ನ ಭಾವನೆಯಾಗಿದೆ. ಹಿಂದಿನ ಘಟನಾವಳಿಗಳ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ನಾವು ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ತಮ್ಮಲ್ಲಿ ಮನವಿ ಮಾಡಿದ್ದೆವು. ತಾವು ಸಹಿತ ಪ್ರಸ್ತಾಪಿಸಲು ಅವಕಾಶ ಕೊಡುವುದಾಗಿ ಭರವಸೆ ನೀಡಿದ್ದಿರಿ. ಪ್ರಶ್ನೋತ್ತರ ಮುಗಿದ ನಂತರ ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಬಹುದೆಂದು ನಾವು ಭಾವಿಸಿದ್ದೆವು. ಆದರೆ, ತಾವು ಸದನದ ಒಳಗೆ ಬಂದಾಗ ದಿಢೀರ್ ಆಗಿ ಪ್ರಶ್ನೋತ್ತರ ತೆಗೆದು ಕೊಳ್ಳದೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಾಗ ನಮ್ಮ ವಿಷಯವನ್ನು ಇಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ನಮಗೆ ಅವಕಾಶ ಸಿಗುವುದಿಲ್ಲ ಎಂಬ ಭಾವನೆ ನಮಗೆ ಉಂಟಾಯಿತು. ಬಹುಶಃ ಇವತ್ತು ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುತ್ತಾರೆ ಎಂದು ಅನಿಸಿತು. ಖರೀದಿ ಪ್ರಕ್ರಿಯೆ ನಿನ್ನೆಯೇ ಬಂದ ಆಗಿದೆ. ಅತ್ಯಂತ ತುರ್ತಿನ ಈ ಸಮಸ್ಯೆಗೆ ಏನಾದರೂ ಒಂದು ಪರಿಹಾರ ಕಂಡುಹಿಡಿಯುವ ಉದ್ದೇಶದಿಂದ ನಾವು ಇದನ್ನು ಪ್ರಸ್ತಾಪಿಸಬಯಸಿದ್ದೆವು. ಅದಕ್ಕೆ ರಾಜ್ಯ ಸರ್ಕಾರದಲ್ಲಿ ಪರಿಹಾರ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ರಾಜ್ಯ ಸರ್ಕಾರದ ಆಹಾರ ಇಲಾಖೆ ಇದರಲ್ಲಿ ಭಾಗಿಯಾಗಿದೆ, ಫುಡ್ ಕಾರ್ಪೋರೇಷನ್ ಇದರಲ್ಲಿ ಭಾಗಿಯಾಗಿದೆ, ಜಿಲ್ಲಾಡಳಿತ ಇದರಲ್ಲಿ ಭಾಗಿಯಾಗಿದೆ, ಹೀಗೆ ಪ್ರತಿಯೊಬ್ಬರೂ ಕೂಡ ಇದರಲ್ಲಿ ಭಾಗಿಯಾಗಿದ್ದಾರೆ.

ಅಧ್ಯಕ್ಷರು:- ದಯವಿಟ್ಟು ಇಲ್ಲ ಡೀಟೈಲ್ಸ್ ಮಾತನಾಡುವುದು ಬೇಡ. ನಿನ್ನೆ ನಡೆದಂತಹ ಇನ್ಸಿಡೆಂಟ್ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಬಿ.ಆರ್. ಯಾವಗಲ್:- ನಾನು ಒಬ್ಬ ಸದಸ್ಯನಾಗಿ, ಜನಪ್ರತಿನಿಧಿಯಾಗಿ ಅಲ್ಲಿ ಉದ್ಭವವಾದಂತಹ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಅದು ಗಂಭೀರ ಸ್ವರೂಪ ತಳೆಯದೇ ಇರುವಂತಾಗಲು ಏನಾದರೂ ಒಂದು ಪ್ರಯತ್ನವನ್ನು ಮಾಡಲೇಬೇಕಾಗಿತ್ತು. ಅಂತಹ ಸನ್ನಿವೇಶ ಬಂದಾಗ ರೈತರ ಪರವಾಗಿ ನಾವು ಮಾತನಾಡಿದೆವು. ಪ್ರತಿಯೊಬ್ಬರಿಗಿಂತ ಮೀರಿದ ಸಮಸ್ಯೆ ರೈತರ

ಸಮಸ್ಯೆಯಾಗಿದೆ. ಅದನ್ನು ಪ್ರಾತಿನಿಧ್ಯ ಮಾಡಲಿಕ್ಕೆ ನಾವೆಲ್ಲಾ ಇಲ್ಲಿ ಧರಣಿ ಮಾಡಿದ್ದು ನಿಜ. ಅದು ನಮಗೆ ಮಹತ್ವವಾದುದಾಗಿತ್ತು. ಅವರಿಗೆ ಯಾವ ರೀತಿ ತಮ್ಮ ಭಾವನೆಗಳನ್ನು ಹೇಳಿಕೊಳ್ಳಲಿಕ್ಕೆ, ಸಂಕಟಗಳನ್ನು ವ್ಯಕ್ತಪಡಿಸಲಿಕ್ಕೆ ಅವಕಾಶ ಇದೆಯೋ ಹಾಗೆಯೇ ನಮಗೂ ಉಂಟು. ಅದನ್ನು ನಾವು ಮಾಡಿದ್ದೇವೆ. ಹೀಗಿರುವಾಗ ನಮ್ಮನ್ನು ಧರಣಿ ಮಾಡಿದರು ಎಂದು ದೂಷಿಸುವುದು ಸರಿಯಲ್ಲ. ಅದು ನಮ್ಮ ಹಕ್ಕು. ಹಿಂದೆ ಧರಣಿ ಮಾಡಿದಂತಹ ಅನೇಕ ಪ್ರಸಂಗಗಳನ್ನು ನಾನು ಇಲ್ಲಿ ತಂದಿದ್ದೇನೆ. ಮಾನ್ಯ ಅಧ್ಯಕ್ಷರಿಗೆ ಬೇಕಾದರೆ ಅವುಗಳನ್ನು ಕಳುಹಿಸಿಕೊಡುತ್ತೇನೆ. ಎಂತಹ ಸಂದರ್ಭದಲ್ಲಿ ನಾವು ಧರಣಿ ಮಾಡಿದ್ದೇವೆ ಎಂಬುದನ್ನು ನೋಡಬೇಕು. ಮೂಲಭೂತ ವಿಷಯವನ್ನು ಬಿಟ್ಟು ಇದನ್ನು ಬಹಳ ತಾಂತ್ರಿಕವಾಗಿ ನೋಡಲಾಗುತ್ತಿದೆ. ನಾವು ಧರಣಿಯನ್ನು ಮುಂದುವರೆಸಿಲ್ಲ, ನೀವೇ ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೀರಿ ಆ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಇವತ್ತಿಗೂ ಕೂಡ ನಾವು ತಯಾರಿದ್ದೇವೆ. ಆದರೆ, ನಿನ್ನೆಯಿಂದ ಯಾವ ಕಾರಣದಿಂದಾಗಿ ತಾವು ಧರಣಿಯನ್ನು ಮುಂದುವರೆಸಿಕೊಂಡು ಬಂದಿದ್ದೀರಿ ಎಂಬುದನ್ನು ಹೇಳಿ ನಾವು ಏನು ತಪ್ಪು ಮಾಡಿದ್ದೇವೆ ಎಂದು ವಿಷಾದ ವ್ಯಕ್ತ ಪಡಿಸಬೇಕು? ಇದರಲ್ಲಿ ನಮ್ಮ ಪತ್ರದಾರಿಕೆ ಎಷ್ಟು? ನಾವು ಅವರು ಮಾತನಾಡಬಾರದು ಎಂದು ಹೇಳಿಲ್ಲ. ನಾವು ಮಾತನಾಡಿದ್ದು ತಪ್ಪಾದರೆ, ಕಾನೂನು ಪ್ರಕಾರ ಸರಿ ಇಲ್ಲದಿದ್ದರೆ ಅದನ್ನು ನಮಗೆ ತೋರಿಸಿ, ನಾವು ಅದನ್ನು ತಿದ್ದುಕೊಳ್ಳುವಂತಹ ಪ್ರಯತ್ನಪಡುತ್ತೇವೆ. ಅದಾಗ್ಯೂ ಈ ವಿಷಯದಲ್ಲಿ ನಮ್ಮಿಂದ ಏನಾದರೂ ತಪ್ಪಾಗಿದ್ದರೆ ಮಾನ್ಯ ಅಧ್ಯಕ್ಷರು ಅದಕ್ಕಾಗಿ ನಮಗೆ ಏನು ಶಿಕ್ಷೆಯನ್ನು ಕೊಡುತ್ತಾರೋ ಅದನ್ನು ಸ್ವೀಕರಿಸಲು ಸಿದ್ಧರಿದ್ದೇವೆ. ಆದರೆ ವಿಚಾರವನ್ನು ಮಾತ್ರ ವ್ಯಕ್ತಪಡಿಸಲು ಸಾಧ್ಯವಿಲ್ಲ, ಇದು ಅಂತಹ ವಿಚಾರವಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):- ಮಾನ್ಯ ಅಧ್ಯಕ್ಷರೇ, ನಾನು ಸದನ ಸಮಾವೇಶಗೊಂಡ ಆರಂಭದಲ್ಲೇ ಇದ್ದು ಕೆಲವೊಂದು ವಿಚಾರಗಳನ್ನು ಹೇಳಬೇಕಾಗಿತ್ತು. ಆದರೆ ಕರ್ನಾಟಕದ ಅತ್ಯಂತ ದಕ್ಷ ಪೋಲೀಸ್ ಅಧಿಕಾರಿ ಮತ್ತು ಓರ್ವ ಸಾಹಿತಿಯೂ ಆಗಿದ್ದ ವಿಜಯ ಸಾಸನೂರವರು ಬೆಳಿಗ್ಗೆ 11.30ಕ್ಕೆ ಆಕಸ್ಮಿಕವಾಗಿ ತೀರಿಕೊಂಡಿದ್ದರು. ನಾನು ಅವರ ಶವವನ್ನು ನೋಡಿ ನನ್ನ ಅಂತಿಮ ನಮನಗಳನ್ನು ಸಲ್ಲಿಸಲು ಹೋಗಿದ್ದರಿಂದ ಸದನಕ್ಕೆ ಬರುವುದು ಸೊಲ್ಪ ತಡವಾಯಿತು. ನನ್ನ ಅಭಿಪ್ರಾಯದಲ್ಲಿ ಸದನವೂ ಸಹಿತ ಈ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸುವುದು ಒಳ್ಳೆಯದು. ವಿಜಯ್ ಸಾಸನೂರವರು ಕರ್ನಾಟಕ ಕಂಡಂತಹ ಅತ್ಯಂತ ದಕ್ಷ ಪೋಲೀಸ್ ಅಧಿಕಾರಿಗಳಲ್ಲಿ ಒಬ್ಬರಾಗಿದ್ದರು. ಹಿಂದುಳಿದವರ ಬಗ್ಗೆ, ಬಡವರ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ ನಂಬಿಕೆ ಇಟ್ಟುಕೊಂಡಿರತಕ್ಕಂತಹ ಅಧಿಕಾರಿಯಾಗಿದ್ದರು. ಉತ್ತರ ಕರ್ನಾಟಕದಿಂದ ಬಂದ ಕೆಲವೇ ಐ.ಪಿ.ಎಸ್. ಅಧಿಕಾರಿಗಳಲ್ಲಿ ಒಬ್ಬರಾಗಿದ್ದ ಅವರು ಪ್ರಾಮಾಣಿಕ ಅಧಿಕಾರಿಯಾಗಿ ಮತ್ತು ಸಾಹಿತಿಗಳಾಗಿ ರಾಜ್ಯಕ್ಕೆ ಅನುಪಮ ಸೇವೆ ಸಲ್ಲಿಸಿದ್ದಾರೆ. ತಮ್ಮ 52 ನೆ ವಯಸ್ಸಿನಲ್ಲೇ ಅವರು ನಿಧನರಾಗಿದ್ದಾರೆ. ಇದು ತುಂಬಾ ದುಃಖ ತರತಕ್ಕಂಥ ವಿಚಾರವಾಗಿದೆ. ಇನ್ನು ನಮ್ಮ ಪಕ್ಷದ ಅಧ್ಯಕ್ಷರಾದ ಶ್ರೀಮಾನ್ ಭೈರೇಗೌಡರು

ನಮ್ಮ ನಿಲುವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಯವಗಲ್‌ರವರು ತಾವು ವಿಷಾದವನ್ನು ವ್ಯಕ್ತಪಡಿಸತಕ್ಕ ವಿಚಾರ ಇದಲ್ಲವೆಂದು ಹೇಳಿದ್ದಾರೆ. ಮಾನ್ಯ ಯಾವಗಲ್‌ರವರು ತಾವು ವಿಷಾದವನ್ನು ವ್ಯಕ್ತಪಡಿಸತಕ್ಕ ವಿಚಾರ ಇದಲ್ಲವೆಂದು ಹೇಳಿದ್ದಾರೆ. ನಾನು ಈ ಸದನಕ್ಕೆ ಬಂದು ಸುಮಾರು 17-18 ವರ್ಷಗಳಾಯಿತು. ನಾನು ಆ ಪಕ್ಷ, ಈ ಪಕ್ಷ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಮೂಲ ವಿಷಯಗಳನ್ನು ಚರ್ಚೆ ಮಾಡತಕ್ಕದ್ದನ್ನು ಬಿಟ್ಟು ಕೇವಲ ಧರಣಿ, ಕೂಗಾಟ ಮತ್ತು ಬಹಿಷ್ಕಾರಗಳಲ್ಲೇ ಹೆಚ್ಚಿನ ಸಮಯ ವ್ಯರ್ಥ ಮಾಡಿ ಅವುಗಳಿಗೇ ಹೆಚ್ಚಿನ ಮಹತ್ವ ಕೊಡುತ್ತಿದ್ದೇವೆಂದು ನನಗನ್ನಿಸುತ್ತಿದೆ. ಇವತ್ತು ರೈತರು ನಮ್ಮೆಲ್ಲರ ಬಗ್ಗೆ ವಿಶ್ವಾಸವನ್ನು ಹೊಂದಿಲ್ಲ. ಇದರಲ್ಲಿ ಯಾವ ಸಂಶಯವೂ ಇಲ್ಲ. ನಾವೀಗ ಸಂಸದೀಯ ನಡವಳಿಕೆಗಳ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಒಂದು ಗಂಟೆ ಕಳೆದ ನಂತರ ರೈತರ ಬಗ್ಗೆ ಚರ್ಚೆ ಮಾಡಿದರೆ ಆಕಾಶವೇನೂ ಕಳಚಿ ಬೀಳುವುದಿಲ್ಲ ಅಥವಾ ಆ ಚರ್ಚೆಯನ್ನು ಬೇಗ ಮಾಡುವುದರಿಂದ ಯಾರೂ ಸಹಾ ತಕ್ಷಣಕ್ಕೇ ಕೋಟ್ಯಾಂತರ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಕಳುಹಿಸಿಕೊಟ್ಟಂತಹ ನಿಲುವಳಿ ಸೂಚನೆ ಬಗೆಗಿನ ಚರ್ಚೆಯನ್ನು ಪ್ರಶ್ನೋತ್ತರ ವೇಳೆಗೆ ಮುಂದೆ ತೆಗೆದುಕೊಳ್ಳಬೇಕು ಎಂಬ ಒತ್ತಾಯವನ್ನು ಮಾಡುವ ಸಲುವಾಗಿ ಎದ್ದು ನಿಂತರು. ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರ ಕ್ಷೇತ್ರಗಳಲ್ಲೂ ಸಹಾ ಬಹಳ ತೊಂದರೆಗಳಿವೆ ಎಂಬುದನ್ನು ನಾವು ಅರಿತಿದ್ದೇವೆ. ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ರೈತರ ವ್ಯವಸಾಯೋತ್ಪನ್ನಗಳಿಗೆ ಬೆಲೆ ಸಿಗದೇ ಇರತಕ್ಕ ಸಂದರ್ಭದಲ್ಲಿ ಆ ಬಗ್ಗೆ ಪ್ರಸ್ತಾಪಿಸಬೇಕೆನ್ನುವ ಮಾನ್ಯ ಸದಸ್ಯರ ತವಕವನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಆದರೆ ಅವರು ದಾಳಿ ಮಾಡಿದಂತಹ ರೀತಿ ಈ ಸದನದ ರೀತಿ ರಿವಾಜುಗಳಿಗೆ ಸರಿಯಾದುದಲ್ಲ ಎಂಬುದು ನನ್ನ ಭಾವನೆಯಾಗಿದೆ. ಈಗಾಗಲೇ ಎರಡು ದಿವಸಗಳ ಕಾಲ ಈ ಸದನದ ಕಲಾಪ ವ್ಯರ್ಥವಾಗಿ ನಾವು ಏನನ್ನೂ ಕೂಡ ಚರ್ಚೆ ಮಾಡುವುದಕ್ಕಾಗಿಲ್ಲ. ನಾವು ಚರ್ಚೆ ಮಾಡಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ತಪ್ಪನ್ನು ಬಯಲಿಗೆ ಎಳೆಯೋಣ. ನಾವು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಮಾಡಿರತಕ್ಕ ಕೆಲಸಗಳ ಬಗ್ಗೆ ಸಹಾ ಸಂಗತಿಗಳನ್ನು ನಾವು ಹೊರಗೆಳೆಯೋಣ. ಈ ರೀತಿ ಇದಕ್ಕೆ ಎಲ್ಲಾದರೂ ಒಂದು ಅಂತಿಮವನ್ನು ನಾವು ಹೇಳಬೇಕಾಗುತ್ತದೆ. ನಾವು 14ನೇ ತಾರೀಖಿನ ಒಳಗೆ ಮುಗಿಸಬೇಕಾಗುತ್ತದೆ. ಸದನದ ಗೌರವಾನ್ವಿತ ಸಭಾ ನಾಯಕರಾದ ಮಾನ್ಯ ಮುಖ್ಯ ಮಂತ್ರಿಗಳು ಎದ್ದು ನಿಂತು ಹೇಳಬೇಕಾಗಿತ್ತು. ಗುಂಡೂರಾವ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಶ್ರೀಮಾನ್ ಜೆ.ಹೆಚ್. ಪಟೇಲರು ತೋಳು ಏರಿಸಿಕೊಂಡು ಹೊಡೆಯುವುದಕ್ಕೆ ಹೋಗಿದ್ದರು. ಆದರೆ ಮಾರನೆ ದಿನ ಶ್ರೀ ಮಾನ್ ಗುಂಡೂರಾವ್‌ರವರು ಜೆ.ಹೆಚ್. ಪಟೇಲರಿಗೆ ದೂರವಾಣಿ ಮಾಡಿ ನಮ್ಮ ಮನೆಗೆ ಉಪಹಾರಕ್ಕೆ ಬನ್ನಿ ಎಂದು ಹೇಳಿದ್ದರು. ಶ್ರೀಮಾನ್ ದೇವರಾಜ ಅರಸ್‌ರವರು ಪೈಲ್ವಾನರಾಗಿದ್ದರು. ಈತರಹದ ನಕಲಿ ಪೈಲ್ವಾನರಲ್ಲ. ಅವರು ನಿಜವಾಗಿ ರಾಜಕೀಯ ಪೈಲ್ವನರಾಗಿದ್ದರು. ಮುಖ್ಯ ಮಂತ್ರಿಗಳಾದವರೆಲ್ಲರೂ ಈ ಕಡೆ ಕೂತಿದ್ದರು. ಮಾನ್ಯ ದೇವೇಗೌಡರು ಈ ರಾಷ್ಟ್ರದ ಪ್ರಧಾನಿಗಳಾದರು. ಮಾನ್ಯ ಬೊಮ್ಮಾಯಿಯವರು ಈ ಕಡೆ

ಕುಳಿತುಕೊಂಡಿದ್ದರು. ಶ್ರೀ ಲಕ್ಷ್ಮೀಸಾಗರ್‌ರವರು ಕುಳಿತುಕೊಂಡಿದ್ದರು, ಶ್ರೀ ಜೆ.ಹೆಚ್. ಪಟೇಲರು ಕುಳಿತುಕೊಂಡಿದ್ದರು. ಆ ಸಂದರ್ಭದಲ್ಲಿ ಕೂಡ ಶ್ರೀ ದೇವರಾಜ್ ಅರಸ್‌ರವರು ವಿರೋಧ ಪಕ್ಷದವರಿಗೆ ವಿಶ್ವಾಸಕ್ಕೆ ತೆಗೆದುಕೊಳ್ಳುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ಇವತ್ತು ನಿಜವಾಗಿಯೂ ನನಗೆ ನೋವಾಗುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಎದ್ದು ನಿಂತು ನಮ್ಮ ಪಕ್ಷದವರೇ ಏನೋ ಮಾಡಿದ್ದಾರೆ, ನೀವು ಎಷ್ಟು ದಿನ ಧರಣಿ ಮಾಡುತ್ತೀರಿ ಅದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯೋಣವೆಂದು ಒಂದು ಮಾತು ಹೇಳಿದ್ದರೆ ಪರಿಸ್ಥಿತಿ ಇಲ್ಲಿಗೆ ಬರುತ್ತಿರಲಿಲ್ಲವೆಂದು ನಾನು ತಿಳಿದಿದ್ದೇನೆ. ಆ ಮಾತನ್ನು ತಾವಾದರೂ ಹೇಳುವುದರ ಮೂಲಕ ನಾವೆಲ್ಲರೂ ಇಲ್ಲಿ ಕೂತು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಸಮಯ ವ್ಯರ್ಥವಾಗಿದೆ. ನಾವು ಹೊರಗಡೆ ಹೋದರೆ ಜನ ನಮಗೆ ನಗೆಪಾಟಲಾಗಿ ನೋಡುತ್ತಾರೆ. ಇದು ಏನು ವಿಧಾನ ಸಭೆಯೋ, ಮುನಿಸಿಪಾಲಿಟಿಯೋ ಏಕೆ ಹೀಗೆ ನಡೆದುಕೊಳ್ಳುತ್ತಿದ್ದೀರಿ ಎಂದು ಹೇಳುತ್ತಾರೆ. ಅವರು ಅಲ್ಲಿ ಸದನ ನಿಲ್ಲಿಸಿದರು ಅದಕ್ಕೆ ನಾವು ಇಲ್ಲಿ ನಿಲ್ಲಿಸಬೇಕು ಎಂದು ಹೇಳಿದರೆ ಇದರಿಂದ ಏನೂ ಉಪಯೋಗ ಆಗುವುದಿಲ್ಲ. ನಮ್ಮ ಕರ್ನಾಟಕದ ವಿಧಾನಸಭೆಗೆ ಒಂದು ಸತ್ ಸಂಪ್ರದಾಯ ಇದೆ. ಆದ್ದರಿಂದ ಅಡಳಿತ ಪಕ್ಷದವರೇ ಆಗಿರಲಿ, ನಾವೇ ಆಗಿರಲಿ ನಾವು ಎಲ್ಲರೂ ಸಹಿತ ನಿಮ್ಮ ತೀರ್ಮಾನಕ್ಕೆ ತಲೆ ಬಾಗುತ್ತೇವೆ. ಸರ್ಕಾರವನ್ನು ಕೆಲವು ಸಾರಿ ನಾವು ಸಹ ಕಿವಿ ಹಿಂಡ ಬೇಕಾಗುತ್ತದೆ. ಸರ್ಕಾರಕ್ಕೆ ಹೇಳಬೇಕಾಗುತ್ತದೆ. ವಿರೋಧ ಪಕ್ಷದವರಿಗೆ ಆದ್ಯತೆ ಕೊಟ್ಟರೆ ಏನಾಗುತ್ತದೆ ಎಂದು ಹೇಳಬೇಕಾಗುತ್ತದೆ. Ultimately we will have our say, they will have their way. ಅವರಿಗೆ ಏನು ಬೇಕು ಆ ದಾರಿಯಲ್ಲಿ ಅವರು ಹೋಗುತ್ತಾರೆ. ನಾವು ಹೇಳುವುದು ನಾವು ಹೇಳುತ್ತೇವೆ. ಪ್ರಜಾಪ್ರಭುತ್ವದಲ್ಲಿ ಅಷ್ಟೇ ಆಗುವುದು. ತಾವು ಆ ಕೆಲಸ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡು ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು, ಮಾನ್ಯ ಕೌಜಲಗಿಯವರು, ಮಾನ್ಯ ಕೆ.ಹೆಚ್. ರಂಗನಾಥ್‌ರವರು, ಮಾನ್ಯ ಎಸ್.ಎಮ್. ಕೃಷ್ಣರವರು ಇವರೆಲ್ಲ ವಿಧಾನಸಭೆ ಅಧ್ಯಕ್ಷರಾಗಿ ತಮ್ಮ ಸ್ಥಾನದಲ್ಲಿ ಕೂತು ಸದನ ನಡೆಸಿರುವವರು. ಇವತ್ತು ಸಂಖ್ಯಾ ಬಲದಿಂದ ಇರಬಹುದು, ಬೇರೆ ದೃಷ್ಟಿಯಿಂದ ಇರಬಹುದು ವಿರೋಧ ಪಕ್ಷಗಳು ಕುಗ್ಗಿರತಕ್ಕಂತಹ ಸಂದರ್ಭದಲ್ಲಿ ನಮ್ಮನ್ನು ತಬ್ಬತಕ್ಕಂತಹ ಕೆಲಸ ಮಾಡುವುದು ಬಿಟ್ಟು ನಮ್ಮನ್ನು ಅಪಹಾಸ್ಯದಿಂದ ನೋಡುವುದು, ನಮ್ಮನ್ನು ಕಡೆಗಾಣಿಸುವುದು ಇದು ಪ್ರಜಾಪ್ರಭುತ್ವದ ವ್ಯವಸ್ಥೆಗೆ ಸರಿಯಲ್ಲವೆಂದು ನಾನು ನೊಂದು ಈ ಮಾತನ್ನು ಹೇಳಿದ್ದೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ನಿನ್ನೆಯಿಂದ ಈ ಸದನದಲ್ಲಿ ನಡೆಯುತ್ತಿರತಕ್ಕಂತಹ ಘಟನೆಗಳು ನನಗೆ ಸಂತೋಷ ತಂದಿಲ್ಲ. ಒಟ್ಟಾರೆ ಕರ್ನಾಟಕ ವಿಧಾನ ಸಭೆಗೆ ಶೋಭೆ ತರುವಂತಹ ಕೆಲಸ ಏನೂ ನಡೆದಿಲ್ಲ. ದುರ್ದೈವದಿಂದ ಪತ್ರಿಕೆಗಳಲ್ಲಿ ನಾನು ನೋಡಿದೆ, ಆಪಾದನೆಗಳ ಮೇಲೆ ಆಪಾದನೆ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಕಾನೂನು ಸಚಿವರು ಪೂರ್ವ ನಿಯೋಜಿತ ಸಂಚು ಮಾಡಿದ್ದಾರೆ ಎಂದು ಆರೋಪ ಮಾಡಿದ್ದರೆ. ಗೂಬೆ ಕೂರಿಸಿದ್ದಾರೆ. ಇದು ಅಸೆಂಬ್ಲಿಯೋ

ದನದ ದೊಡ್ಡಿಯೋ, ನಕಲಿ ಪೈಲ್ವಾನರು ಈ ಎಲ್ಲ ಶಬ್ದಗಳು ಸಂಸದೀಯ ಗ್ರಂಥ ಭಂಡಾರಕ್ಕೆ ಹೊಸದಾಗಿ ಸೇರಿಸಬಹುದಾದಂತಹ ನುಡಿಮುತ್ತುಗಳು ಎಂದು ತಾವು ಹೇಳಿದರೆ ನಾನು ಸಂತೋಷ ಪಡುತ್ತೇನೆ. ನಮ್ಮ ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡಬಳಿಕೆಯ ನಿಯಮ ಎಂದು ಇದೆಯೇ ಹೊರತು ವಿರೋಧ ಪಕ್ಷದ ನಡವಳಿಕೆ ಮತ್ತು ಆಡಳಿತ ಪಕ್ಷದ ನಡವಳಿಕೆ ಎಂದು ಪುಸ್ತಕದಲ್ಲಿ ಬರೆದಿಲ್ಲ. ಈ ಮೂವತ್ತು ವರ್ಷಗಳ ನನ್ನ ಅನುಭವ ಸಾಲದು ಎಂದು ನಾನು ಮತ್ತೊಂದು ಸಾರಿ ಈ ಪುಸ್ತಕವನ್ನು ಓದಿದೆ. ಎಲ್ಲಿಯೂ ಬಾವಿಗೆ ಬೀಳುವುದು ಸರಿ ಎಂದು ಈ ಪುಸ್ತಕದಲ್ಲಿ ಬರೆದಿಲ್ಲ. ಸಂವಿಧಾನಿಕ ನಡವಳಿಕೆಗಳಲ್ಲಿ ಕೆಲವನ್ನು ಬರೆದಿದ್ದೇವೆ, ಕೆಲವನ್ನು ಬರೆಯುವುದಕ್ಕೆ ಆಗಲಿಲ್ಲ. ಇನ್ನು ಮೇಲೆ ಬಾವಿಗೆ ಬೀಳುವುದು ಕೂಡ ಒಂದು ಸಂವಿಧಾನಿಕ ನಡೆವಳಿಕೆ ಎಂದು ಬರೆಯಬೇಕು. ಬಾವಿಗೆ ಬೀಳುವುದು ಸರಿಯಲ್ಲವೆಂದು ಹೇಳುವವರಿಗೆ ಅವರು ಬಿದ್ದರೆ ಏನು ಇವರು ಬಿದ್ದರೆ ಏನು? ಯಾರು ಬಿದ್ದರೂ ತಪ್ಪು. ಆ ತಪ್ಪನ್ನು ತಿದ್ದಿಕೊಂಡು ಮುಂದೆ ಕೆಲಸ ನಡೆಸಿಕೊಂಡು ಹೋಗಬೇಕು. ಹೊಸ ಹೊಸ ಶಬ್ದ ಭಂಡಾರಗಳನ್ನು ನಮ್ಮ ಕಡತಕ್ಕೆ ಸೇರಿಸುತ್ತಾ ಹೋಗಿದ್ದೇವೆ. ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಹೇಳಿದ್ದೇನೆ, ನಿಲುವಳಿ ಸೂಚನೆಗೆ ಪ್ರಾತಿನಿಧ್ಯ ಸಿಗಬೆಕಾದುದು ನಮ್ಮ ನಡವಳಿಕೆಯ ನಿಯಮಗಳಲ್ಲಿ ಅತ್ಯಂತ ಗಮನಿಸಬೆಕಾದ ಅಂಶ. ಆದರೆ ಪ್ರಶ್ನೆ ಅದು ಅಲ್ಲ, ನಾನು ನಿನ್ನೆ ಹೇಳಿದ್ದೇನೆ. ಇವತ್ತು ಪುನಃ ಪುನಃ ಹೇಳುತ್ತೇನೆ. ನಾನು 1971ನೇ ಇಸವಿಯಲ್ಲಿ ಲೋಕಸಭೆಗೆ ಪ್ರವೇಶ ಮಾಡಿದ್ದೇನೆ. ನನ್ನ ಈ 30 ವರ್ಷಗಳ ಈ ಸಂವಿಧಾನಿಕ ಬದುಕಿನಲ್ಲಿ ಇಂತಹ ಘಟನೆಗಳು ಇತ್ತೀಚೆಗೆ ಬಹಳ ಹೆಚ್ಚಿಗೆ ನಡೆಯುತ್ತಿವೆ. ಬಹಶಃ ಇದಕ್ಕೆ ಕಾರಣವೇನೆಂದು ಪ್ರಸ್ತಾಪ ಮಾಡಿದರೆ ಮತ್ತೆ ಗೊಂದಲಕ್ಕೆ ಕಾರಣವಾಗುತ್ತದೆ. ಅದಕ್ಕಾಗಿ ನಾನು ಹೇಳುವುದಿಲ್ಲ. ಬಹಳ ಪ್ರಮುಖವಾದ ಅಂಶ ಏನೆಂದರೆ, ನಾವು ಇನ್ನೊಬ್ಬರಿಗೆ ಬುದ್ಧಿ ಹೇಳುವುದಕ್ಕೆ ಹೋಗುವಾಗ ನಾವು ಏನು ಮಾಡುತ್ತಿದ್ದೇವೆಂದು ನಮ್ಮ ಮನಸ್ಸು ಮುಟ್ಟಿ ನೋಡಿಕೊಳ್ಳಬೇಕು. ಅದಕ್ಕಿಂತ ಹೆಚ್ಚಿಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಬುದ್ಧಿ ಹೇಳುವುದಕ್ಕೆ ಒಂದು ಗಳಿಕೆ ಇರಬೇಕು, ಅದರ ಉಳಿಕೆ ಇರಬೇಕು, ಗಳಕೆ ಉಳಿಕೆ ಗಳು ಇಲ್ಲದೆ ಬುದ್ಧಿ ಹೇಳುವುದಕ್ಕೆ ಹೋದರೆ ಯಾರೂ ಕೇಳುವುದಿಲ್ಲ. ಆದ್ದರಿಂದ ನಾನು ಮಾನ್ಯ ನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ ಅದು ಒಂದು ರಾಜಕೀಯ ಗಿಮಿಕ್ಸ್ ಎನ್ನುವದು ಯಾರ ಪೂರ್ವ ನಿಯೋಜಿತ ಸಂಚು ಇದೆಲ್ಲಾ ನಾವು ಏಕೆ ಮಾಡಬೇಕು? ಚುನಾವಣೆಯಲ್ಲಿ ಟಿಕೆಟ್ ಕೊಡುವವರೆಗೆ ಪಕ್ಷ. ಚುನಾವಣೇಯಲ್ಲಿ ಗೆಲ್ಲುವವರೆಗೆ ಪಕ್ಷ. ಗೆದ್ದು ಇಲ್ಲಿ ಗೆ ಬಂದ ಮೇಲೆ ನಾವು ಪ್ರತಿನಿಧಿಗಳು. ಮತಕೊಟ್ಟವರಿಗೂ ಪ್ರತಿನಿಧಿ ಮತ ಕೊಡದೆ ಇರುವವರಿಗೂ ಪ್ರತಿನಿಧಿ. ಬಿಜೆಪಿಯವರಿಗೂ ಪ್ರತಿನಿಧಿ, ಕಾಂಗ್ರೆಸ್‌ನವರಿಗೂ ಪ್ರತಿನಿಧಿ ಕಮ್ಯುನಿಷ್ಟನವರಿಗೂ ಪ್ರತಿನಿಧಿ, ಜನತಾದಳದವರಿಗೂ ಪ್ರತಿನಿಧಿ, ನಮಗೆ ಓಟು ಕೊಟ್ಟವನು ಸುಮ್ಮನೆ ಇರುತ್ತಾನೆ, ನಮಗೆ ಮತ ಕೊಡದೆ ಇರವವನು ಮೈ ಮೇಲೆ ಬೀಳುತ್ತಾನೆ. ಖರೀದಿ ಕೇಂದ್ರ ಮುಚ್ಚಿದ್ದೀರಿ ಏನು ಮಾಡುತ್ತಿದ್ದೀರಿ ನೀವು ಎಂದು ನಮಗೆ ಓಟು ಕೊಡದೇ ಇರುವವನು ಕೇಳುತ್ತಾನೆ. ಮತ ಕೊಟ್ಟವನು ಗಂಭೀರವಾಗಿ ಸುಮ್ಮನೆ ಇರುತ್ತಾನೆ. ಅವನಿಗೆ ಸಮಾಧಾನ ಮಾಡುವುದು ನಮ್ಮ ಕರ್ತವ್ಯವಾಗಿದೆ. ಆ ಕರ್ತವ್ಯ ಮಾಡುವಾಗ ನಾವು ಎಲ್ಲರೂ

ಸಂವಿಧಾನಬದ್ಧವಾಗಿ ಇರಬೇಕು, ಎಲ್ಲವೂ ವಿಧಾನಸಭೆಯ ಕಾರ್ಯ ನಡಾವಳಿಯ ನಿಯಮಗಳಲ್ಲಿ ಇರಬೇಕು. ಇದನ್ನು ನಾವೇ ರೂಪಿಸಿಕೊಂಡಿದ್ದೇವೆ. ಮಾಡಿದ್ದನ್ನು ತಪ್ಪು ಇಲ್ಲ ಎಂದು ಹೇಳುವುದಿಲ್ಲ. ಕೆಲವು ಸಾರಿ ಪರಿಸ್ಥಿತಿ ನಮ್ಮ ಹತೋಟಿ ಮೀರಿದಾಗ ನಡಾವಳಿಗಳನ್ನು ಕೇಳುವುದಿಲ್ಲ, ಅಧ್ಯಕ್ಷರಿಗೂ ಕೇಳುವುದಿಲ್ಲ. ಪಕ್ಷದ ಮುಖಂಡರಿಗೂ ಕೇಳುವುದಿಲ್ಲ. ನಿಮ್ಮ ಪಕ್ಷ ಇದೆ ಇಟ್ಟುಕೊಳ್ಳಿ ನನ್ನ ಪಾಡಿಗೆ ನನಗೆ ಬಿಟ್ಟುಬಿಡಿ, ನಾನು ಜನರಿಗೆ ಉತ್ತರ ಹೇಳಬೇಕೆಂದು ಹೇಳುತ್ತಾನೆ. ಅಂತಹ ಪ್ರಸಂಗ ನಿನ್ನೆ ನಡೆದಿದೆಯೇ ಹೊರತು, ಅದಕ್ಕಿಂತ ವಿಶೇಷವಾಗಿ ಏನೂ ನಡೆದಿಲ್ಲ. ಜನ ಪ್ರತಿನಿಧಿಗಳಾಗಿ ನಾವು ಅದನ್ನು ಅರ್ಥ ಮಾಡಿಕೊಳ್ಳಬೇಕು. ಎರಡು ದಿವಸ ಸಭೆ ನಡೆದಿಲ್ಲ. ಮಾನ್ಯ ಸಿಂಧ್ಯರವರು ಹೇಳಿದ ಮಾತು ಬಹುತೇಕ ಒಪ್ಪುತ್ತೇನೆ/ ರೈತರ ವಿಚಾರ ಚರ್ಚೆ ಮಾಡುವುದು ಬಿಟ್ಟು ನಾವು ಸಂವಿಧಾನಕ್ಕೆ ಜಗಳ ಮಾಡುತ್ತಿದ್ದೇವೆ. ವೈಜ್ಞಾನಿಕ ವಿಧಾನದಲ್ಲಿ ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಚರ್ಚೆ ಮಾಡೋಣ. ನಾವು ಪತ್ರಿಕೆ ನೋಡಿದರೆ ಕಾಂಗ್ರೆಸ್‌ನವರು ಅದರಲ್ಲೂ ಕಾನೂನು ಸಚಿವರು ಸಂಚು ಮಾಡಿದರು ಎಂದು ಪತ್ರಿಕೆಯಲ್ಲಿ ಬಂದಿದೆ, ಇದಕ್ಕೆ ಉತ್ತರ ಹೇಳಬೇಕಾದವರು ಯಾರು? ಇಂತಹ ಪ್ರಸಂಗ ಬರದ ಹಾಗೆ ತಡೆಗಟ್ಟುವುದಕ್ಕೆ ತಾವಾಗಲಿ ಮಾನ್ಯ ಮುಖಂಡರಾಗಲಿ ಸಲಹೆ ಕೊಟ್ಟರೆ ನಾನು ಅದನ್ನು ಒಪ್ಪಿಕೊಳ್ಳುವುದಕ್ಕೆ ಈಗಲೂ ತಯಾರಿದ್ದೇನೆ. ಬಹಳ ವಿಶೇಷವಾಗಿ ಇದನ್ನು ಗಮನಿಸಿದೆ, ರೈತರ ವಿಚಾರಗಳನ್ನು ಚರ್ಚೆ ಮಾಡೋಣ, ಇಂತಹ ಸಮಸ್ಯೆಗಳು ಮರುಕಳಿಸದ ಹಾಗೆ ನೋಡಿಕೊಳ್ಳುತ್ತೇವೆ ಎಂದು ನಾವು ಜವಾಬ್ದಾರಿ ತೆಗೆದುಕೊಳ್ಳಬಹುದು, ರೈತರ ಸಮಸ್ಯೆ ಬಂದರೆ ಭೈರೇಗೌಡರು ಈ ವಯಸ್ಸಿನಲ್ಲಿಯೂ ದೊಣ್ಣೆ ಎತ್ತುತ್ತಾರೆ. ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಈ ಘಟನೆಗಳನ್ನು ಬಹಳ ದೊಡ್ಡದಾಗಿ ಮಾಡಿಕೊಳ್ಳದೆ ದಯವಿಟ್ಟು ಅಂತಹ ಘಟನೆಯಿಂದ ಯಾರ ಮನಸ್ಸಿಗಾದರೂ ನೋವಾಗಿದ್ದರೆ ನಿಮ್ಮ ಮನಸ್ಸಿನಲ್ಲಿ ಚಂದ್ರೇಗೌಡರೇ ಪ್ರಚೋದನೆ ಮಾಡಿದರು, ಕಾನೂನು ಮಂತ್ರಿ ಪ್ರಚೋದನೆ ಮಾಡಿದರು ಎಂದರೆ ನಾನು ಅಂತಹ ಕೆಲಸ ಮಾಡುವುದಿಲ್ಲ. ನನ್ನ ಮೂವತ್ತು ವರ್ಷಗಳ ಸಂಸದೀಯ ಜೀವನದಲ್ಲಿ ಮಾಡಿಯೂ ಇಲ್ಲ. ಇನ್ನು ಮುಂದೆ ಮಾಡುವುದೂ ಇಲ್ಲ. ನಿಮ್ಮಲ್ಲಿ ಮನವಿ ಮಾಡುತ್ತೇನೆ ಇದನ್ನು ಮರೆತು ರಾಜಕೀಯ ಹಿತಕ್ಕಾಗಿ ಏನು 224 ಜನರಿಗೆ ಆಯ್ಕೆ ಮಾಡಿ ಕಳೂಹಿಸಿದ್ದಾರೆ ನಮ್ಮ ನಮ್ಮ ಜವಾಬ್ದಾರಿ ಎಷ್ಟರ ಮಟ್ಟಿಗೆ ಸಾಧ್ಯ ಅಷ್ಟರ ಮಟ್ಟಿಗೆ ಉಳಿಸುವುದಕ್ಕೆ ಪ್ರಯತ್ನ ಮಾಡೋಣ. ಎಲ್ಲದಕ್ಕೂ ಪರಿಹಾರ ಕೊಡುತ್ತೇವೆಂದು ಇಲ್ಲ. ನಾವು ಇದರಲ್ಲಿ ಪಾಲಿಲ್ಲ ಎಂದರೂ ಸಿಂಧ್ಯರವರು, ಬೈರೇಗೌಡರು ಒಳಗಡೆ ಇರುವ ಕೋಪ ಮುಚ್ಚಿಟ್ಟುಕೊಳ್ಳುವುದಕ್ಕೆ ಆಗಿಲ್ಲ, ಹೇಳುವುದು ಹೇಳಿ ಬಿಟ್ಟಿದ್ದಾರೆ. ಆದರೂ ನಾವು ಇಲ್ಲಿ ಪಾಲುದಾರರು ಅಲ್ಲ. ಅವರ ಕಡೆಯಿಂದ ಅಪೀಲು ಮಾಡಿದ್ದಾರೆ, ತಾವು ಅದಕ್ಕೆ ಸ್ಪಂದಿಸಿದ್ದೀರಿ, ಈ ವಿಷಯವನ್ನು ಮುಕ್ತಾಯ ಮಾಡಿ ನಾವು ಕಾರ್ಯಕಲಾಪ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಅವರಲ್ಲಿ ವಿನಯಪೂರ್ವಕವಾಗಿ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ.

3.40 ಪಿ.ಎಂ.

ಶ್ರೀ ಸಿ.ಚೆನ್ನಿಗಪ್ಪ (ಕೊರಟಗೆರೆ) :- ಮಾನ್ಯ ಅಧ್ಯಕ್ಷರೆ, ರೈತರ ಬೆಳೆಗಳಿಗೆ ಬೆಲೆಗಳು ಕುಸಿದು ಇದೇ ಭೂಕಂಪದಂಥ ವಾತಾವರಣದಂತಾಗಿ ರೈತರು ಸಾಯುತ್ತಿದ್ದಾರೆಂದು ನಾನು ಹೇಳಬಯಸುತ್ತೇನೆ. ಇಂದು ಬಿ.ಇ.ಬಿ.ಎಸ್ಸಿ. ಓದಿದವರೆಲ್ಲರೂ ತೋಟಗಳಲ್ಲಿ ಟೊಮೋಟೋ ಹಣ್ಣುಗಳನ್ನು ಬೆಳೆಯುತ್ತಿದ್ದಾರೆ. ಒಂದು ರೂಪಾಯಿಗೆ ನಾಲ್ಕು ಕೆ.ಜಿ.ಯಂತೆ ದರವಾಗಿ ಆ ರೈತರುಗಳು ಇಂದು ಸಾಯುತ್ತಿದ್ದಾರೆ. ಆದುದರಿಂದ, ವಿರೋಧ ಪಕ್ಷದ ನಾಯಕರು ತಂದಿರುವ ನಿಲುವಳಿ ಸೂಚನೆಗೆ ಅವಕಾಶ ಕೊಟ್ಟು ಚರ್ಚೆ ಮಾಡಲು ತಾವು ಅನುವು ಮಾಡಿಕೊಡಬೇಕು. ಶಾಸಕರಾಗಿರುವ ನಾವೆಲ್ಲರೂ ವೃಥಾ ಜಗಳವಾಡುವ ಸಂಪ್ರದಾಯ ಎಂದೂ ಬರಬಾರದು. ಇಂಥ ಸಂದರ್ಭದಲ್ಲಿ ಸರ್ಕಾರ ನಡೆಸುವ ನಮ್ಮ ನಾಯಕರೇ ಎದ್ದು ನಿಂತು ನೀವು ಕೊಟ್ಟಿರುವ ನಿಲುವಳಿ ಸೂಚನೆ ಉತ್ತಮವಾದುದೇ ಆಗಿದೆ, ಅದರ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಬೇಕಾದ ಅಗತ್ಯತೆ ಈಗ ಇದೆ. ಆದರೆ ಆ ರೀತಿಯಲ್ಲಿ ಅವರು ಇನ್ನೂ ಹೇಳದಿರುವುದು ವಿಷಾದಕರವಾದ ವಿಷಯ. ಈಗಾಗಲೇ ಎರಡು ದಿನಗಳ ಕಾಲ ಸದನದ ಕಲಾಪವೇ ಸರಿಯಾಗಿ ನಡೆದಿಲ್ಲ. ನಮ್ಮ ನಾಯಕರು ಹೇಳಿದ ಹಾಗೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯತಿಯ ರೀತಿಯಲ್ಲಿ ಜಗಳವಾಡಿ ಕಿತ್ತಾಡಿಕೊಂಡು ಹೋಗುವುದು ಸದನಕ್ಕೆ ಶೋಭೆ ತರುವುದಿಲ್ಲವಾದ ಕಾರಣ ಸರ್ಕಾರ ನಡೆಸುವ ನಮ್ಮ ನಾಯಕರು ಮಧ್ಯೆ ಪ್ರವೇಶಿಸಿ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಬಿ.ಬಿ ಶಿವಪ್ಪ (ಸಕಲೇಶ ಪುರ):- ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ನಡೆದ ಕಾರ್ಯಕಲಾಪಗಳನ್ನು ವೀಕ್ಷಿಸಿದ ನಾನು ನನ್ನ ಅನಿಸಿಕೆ ಹೇಳುವುದೇನೆಂದರೆ ಬಹುಕಾಲದಿಂದ ನೆನಗುದಿಗೆ ಬಿದ್ದಿದ್ದ ರೈತರ ಸಮಸ್ಯೆಗಳಿಗೆ ನಿನ್ನೆಯಿಂದ ಪರಿಹಾರ ಸಿಕ್ಕಿಬಿಟ್ಟಿದೆ. ಏಕೆಂದರೆ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಲಕ್ಷಾಂತರ ರೈತರುಗಳು ಬೆಂಗಳೂರಿಗೆ ಏನು ಬಂದಿದ್ದಾರೆ ಅವರುಗಳೆಲ್ಲ ಇಂದು ಸಂತೋಷಗೊಂಡು, ಸಂತೃಪ್ತಿಗೊಂಡು ವಾಪಸ್ಸು ತಮ್ಮ ಊರುಗಳಿಗೆ ಹೋಗಿ ಊಟ ಮಾಡಿ ಮಲಗುವವರಿದ್ದಾರೆ. ಸದನದಲ್ಲಿ ವಿರೋಧ ಪಕ್ಷ ಆಡಳಿತ ಪಕ್ಷಕ್ಕೆ ಧಿಕ್ಕಾರ ಹಾಕಿದರು, ಆಡಳಿತ ಪಕ್ಷ ಕೇಂದ್ರ ಸರ್ಕಾರಕ್ಕೆ ಧಿಕ್ಕಾರ ಹಾಕಿದ್ದಾರೆ. ಈ ಎರಡೂ ಧಿಕ್ಕಾರಗಳ ಶಬ್ದದೊಂದಿಗೆ ರೈತರ ಸಮಸ್ಯೆ ಪರಿಹಾರವಾಯಿತು ಎಂದು ನಾನು ತಿಳಿದು ಕೊಂಡಿದ್ದೇನೆ. ಇದಕ್ಕಿಂತಲೂ ಹೆಚ್ಚಿನ ಪರಿಹಾರ ಸದನದಲ್ಲಿ ಸೂಚಿಸುವ ಅಗತ್ಯವಿಲ್ಲ. ನಿನ್ನೆ ನಡೆದ ಘಟನೆಗೆ ಸಂಬಂಧಪಟ್ಟಂತೆ ನಾನು ನೇರವಾಗಿ ಹೇಳಬಯಸುವುದೇನೆಂದರೆ ಮಾನ್ಯ ವಿರೋಧ ಪಕ್ಷ ನಾಯಕರು ಎದ್ದು ನಿಂತು ಮಾತನಾಡತಕ್ಕಂಥ ಸಂದರ್ಭದಲ್ಲಿ ಸಂಸದೀಯ ನಡಾವಳಿಗಳ ಪ್ರಕಾರ ಅದರ ಬಗ್ಗೆ ತಿಳಿದಿರುವ ಅಲ್ಪ ತಿಳುವಳಿಕೆಯ ಪ್ರಕಾರ ಸದನದಲ್ಲಿದ್ದ ಎಲ್ಲಾ ಪಕ್ಷಗಳ ಸದಸ್ಯರುಗಳೂ ಕೂಡ ವಿರೋಧ ಪಕ್ಷದ ನಾಯಕರ ಮಾತುಗಳನ್ನು ಆಲಿಸಬೇಕಾದ ಅವಶ್ಯಕತೆ ಇತ್ತು. ಈ ರೀತಿ ಮಾಡಿ ಎರಡು ದಿವಸಗಳಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಮಾರ್ಗದರ್ಶನ ಕೊಟ್ಟು ಸರಿಯಾದ ರೀತಿಯಲ್ಲಿ ನಡೆಯುವಂತೆ ಮಾಡಬಹುದಾಗಿತ್ತು. ಆದರೆ ಅದನ್ನು ಮಾಡದೇ ಕೇವಲ ಧಿಕ್ಕಾರಗಳಲ್ಲಿಯೇ ಎರಡು ದಿನಗಳ ಕಾಲವನ್ನು ಕಳೆಯಲಾಗಿದೆ. ಈಮದು ತಾವು ನಮಗೆ ರಕ್ಷಣೆ ಕೊಡಬೇಕಾದ ಅಗತ್ಯತೆ ಇದೆ. ಏಕೆಂದರೆ ಆಡಳಿತ ಪಕ್ಷಕ್ಕೆ ರಕ್ಷಣೆ ಕೊಡಲು ಸಾಕಷ್ಟು

ವ್ಯವಸ್ಥೆ ಇದೆ. ಅಧ್ಯಕ್ಷರಾದ ತಮಗೆ ನಾನು ಬುದ್ಧಿವಾದ ಹೇಳುತ್ತಿದ್ದೇನೆಂದು ದಯವಿಟ್ಟು ತಪ್ಪು ತಿಳಿಯಬಾರದು, ವಿರೋಧ ಪಕ್ಷದ ಕಡೆ ತಮ್ಮ ಗಮನ ದಯವಿಟ್ಟು ಬರಬೇಕಾಗುತ್ತದೆ. ಈ ಸದನದಲ್ಲಿ ವಿರೋಧ ಪಕ್ಷಕ್ಕೆ ರಕ್ಷಣೇ ಕೊಡುವ ಏಕೈಕ ನಾಯಕ ಎಂದರೆ ಅದು ಸಭಾಧ್ಯಕ್ಷರೇ ಆಗಿರುತ್ತಾರೆ. ಆದುದರಿಂದ, ನೀವು ಯಾರನ್ನೂ ಈ ವಿಚಾರದಲ್ಲಿ ಕೇಳಬೇಕಾದ ಅವಶ್ಯಕತೆಯೇ ಇಲ್ಲ. ತಮ್ಮ ಅಧಿಕಾರವನ್ನು ತಾವು ಉಪಯೋಗಿಸಿ ರಕ್ಷಣೆ ಕೊಡಬಹುದು. ಕೇವಲ ಧಿಕ್ಕಾರಗಳಿಂದಲೇ ರೈತರ ಸಮಸ್ಯೆ ಪರಿಹಾರವಾಗುತ್ತದೆ ಎಂದು ಹೇಳುವುದಾದರೆ ಇನ್ನೂ ಮೂರು ದಿವಸಗಳ ಕಾಲ ಧಿಕ್ಕಾರಗಳನ್ನೇ ಹಾಕೋಣ. ಆದರೆ ಅದು ಸಾಧ್ಯವಿಲ್ಲದ ಮಾತು. ಇನ್ನು ಕೇವಲ ನಾಲ್ಕಾರು ದಿವಸಗಳ ಕಾಲ ಮಾತ್ರ ಅಧಿವೇಶನ ನಡೆಯುವುದರಿಂದ ಇನ್ನೂ ಅನೇಕ ಮಹತ್ತರವಾದ ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ. ಅನೇಕ ಸಮಸ್ಯೆಗಳ ಬಗ್ಗೆ ಚರ್ಚಿಸಬಹುದಾಗಿದ್ದ ಪ್ರಶ್ನೋತ್ತರ ಕಾಲ ನಿನ್ನೆ ಹೊರಟು ಹೋಯಿತು. ನಾನೇ ಕಳುಹಿಸಿದ 48 ಪ್ರಶ್ನೆಗಳ ಪೈಕಿ ಕೇವಲ ಎರಡು ಪ್ರಶ್ನೆಗಳು ಮಾತ್ರ ಚುಕ್ಕೆಗುರುತಿನದಾಗಿದ್ದು ಮಿಕ್ಕವೆಲ್ಲವೂ ಚುಕ್ಕೆಗುರುತಿಲ್ಲದ ಪ್ರಶ್ನೆಗಳಾಗಿಸಿದ್ದಾರೆ. ಆ ಎರಡು ಪ್ರಶ್ನೆಗಳ ಮೇಲೂ ಚರ್ಚೆ ಮಾಡಲು ನಮಗೆ ಅವಕಾಶ ಇಲ್ಲವೆಂದರೆ ಹೇಗೆ? ಪ್ರಶ್ನೋತ್ತರ ಕಾರ್ಯಕ್ರಮ ಅತೀ ಮುಖ್ಯವಾದ ಕಾರ್ಯಕ್ರಮವಾಗಿದೆ. ಇದನ್ನು ಯಾವುದೇ ಕಾರಣದಿಂದ ತಪ್ಪಿಸುವ ಕೆಲಸವಾಗಬಾರದು. ಕಳೆದ ಸದನದಲ್ಲೂ ಪ್ರಶ್ನೋತ್ತರ ಒಂದು ದಿನ ತಪ್ಪಿತ್ತು. ಈಗಲೂ ಹಾಗೆಯೇ ಆಗುತ್ತಿದೆ. ಇದೇ ರೀತಿಯಾದರೆ ಜನರ ಸಮಸ್ಯೆಗಳ ಬಗ್ಗೆ ಈ ಸದನದಲ್ಲಿ ಜನಪ್ರತಿನಿಧಿಗಳು ಯಾವ ರೀತಿಯಾಗಿ ಪ್ರಸ್ತಾಪ ಮಾಡಬೇಕೆಂಬುದೇ ನನಗೆ ಅರ್ಥವಾಗುತ್ತಿಲ್ಲ. ನಿನ್ನೆ ನಡೆದ ಘಟನೆಯಲ್ಲಿ ಆಡಳಿತ ಪಕ್ಷದ ಸದಸ್ಯರು ಸ್ವಲ್ಪ ತಮ್ಮ ಸಂಯಮವನ್ನು ಕಳೆದುಕೊಂಡಿದ್ದಾರೆ ಸದನದಲ್ಲಿ ಸಂಯಮವನ್ನು ಕಳೆದುಕೊಂಡರೆ ಕೆಲಸವಾಗುವುದಿಲ್ಲ. ಸ್ವಲ್ಪ ಸಾವಧಾನದಿಂದ ಇದ್ದು ಅವರ ವರ್ಥನೆಯನ್ನು ಬದಲಾಯಿಸಿಕೊಂಡಿದ್ದರೆ ಇವೊತ್ತು ಇಷ್ಟು ಗೊಂದಲಕ್ಕೆ ಇಷ್ಟು ಅವಕಾಶವಾಗುತ್ತಿರಲಿಲ್ಲ. ಆದುದರಿಂದ, ಅಧ್ಯಕ್ಷರಾದ ತಾವು ಆಡಳಿತ ಪಕ್ಷಕ್ಕೆ ಸ್ವಲ್ಪ ಸಲಹೆ ಕೊಟ್ಟು ಉದ್ರೇಕಗೊಂಡು ಸಂಯಮವನ್ನು ಕಳೆದುಕೊಳ್ಳಬೇಡಿ ಎನ್ನುವಂತೆ ಕಿವಿಮಾತು ಅವರಿಗೆ ಹೇಳಬೇಕಾಗುತ್ತದೆ. ಈ ರೀತಿ ಹೇಳಿ ಮುಂದೆ ಸದನದ ಕಲಾಪ ಸರಿಯಾಗಿ ನಡೆಯುವಂತೆ ಎಲ್ಲ ಸದಸ್ಯರು ಸಹಕರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ):- ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿನಗಳ ಕಾಲ ಸದನ ನಡೆಯದ ಹಾಗೆ ಏನು ವಿವಾದವೇರ್ಪಟ್ಟಿದೆ ಅದನ್ನು ಅಂತಿಮಗೊಳಿಸಲು ತಾವು ಸಭಾ ನಾಯಕರನ್ನು ಕರೆಸಿ ಒಂದು ತೀರ್ಮಾನ ತೆಗೆದುಕೊಳ್ಳಲು ಪ್ರಯತ್ನ ಮಾಡಬಹುದೆಂದು ನಾನು ಸಲಹೆ ಮಾಡುತ್ತೇನೆ. ಏಕೆಂದರೆ ಈಗಾಗಲೇ ಎರಡು ದಿನಗಳ ಕಾಲಕ್ಕೆ ಸದನ ನಡೆಸಲು 6 ಲಕ್ಷ ರೂಪಾಯಿಗಳು ಖರ್ಚಾಗಿದೆ.

ಅಧ್ಯಕ್ಷರು:- ನಿಮ್ಮ ಸಲಹೆಗೆ ಧನ್ಯವಾದಗಳು. ಎಲ್ಲಾ ಪಕ್ಷದ ನಾಯಕರುಗಳೆ ಮತ್ತು ಸದಸ್ಯರುಗಳೆ ಈಗ ನಾನು ರೂಲಿಂಗ್ ಕೊಡುತ್ತಿಲ್ಲ. ನನ್ನ ವಿನಂತಿ ಏನೆಂದರೆ ಸಂಸದೀಯ

ನಡವಳಿಕೆಗಳಲ್ಲಿ ಆಗಾಗ್ಗೆ ಇಂಥ ಕಹಿ ಪ್ರಸಂಗಗಳು ನಡೆಯುತ್ತವೆ. ನಾನು ಮೊದಲು ಪದವೀಧರರ ಕ್ಷೇತ್ರದಿಂದ 1966ರಲ್ಲಿ ವಿಧಾನ ಪರಿಷತ್ತಿಗೆ ಚುನಾಯಿತನಾಗಿದ್ದೆ. 35 ವರ್ಷದ ನನ್ನ ಅನುಭವದಲ್ಲಿ ಹೇಳುವುದಾದರೆ ಹಿಂದೆ 26 ವರ್ಷಗಳ ಹಿಂದೆ ವಿಧಾನ ಪರಿಷತ್ತಿನಲ್ಲಿ ಸಭಾಪತಿಯಾದಾಗಿನಿಂದಲೂ ಕೂಡ ಇಂಥ ಕಹಿ ಪ್ರಸಂಗಗಳು ನಡೆದಿವೆ. ಆಗ ಕಹಿ ಪ್ರಸಂಗ ವಿಧಾನ ಪರಿಷತ್ತಿನಲ್ಲಿ ಹೇಗೆ ನಡೆಯುತ್ತಿದ್ದವೋ ಅದನ್ನು ನೆನಪಿಸಿಕೊಂಡರೆ ಇವೊತ್ತಿನದು ಅಂಥ ಕಹಿ ಪ್ರಸಂಗವೇ ಅಲ್ಲ. ತುರ್ತುಪರಿಸ್ಥಿತಿಯ ಸಮಯದಲ್ಲಿ ರಾಮಕೃಷ್ಣ ಹೆಗಡೆಯವರು ಆಗಿ ವಿರೋಧ ಪಕ್ಷದ ನಾಯಕರಾಗಿದ್ದರು. ಒಂದು ಕಡೆ ಉಳ್ಳಾಲುರು ಇದ್ದರೆ ಇನ್ನೊಂದು ಕಡೆ ಮಲ್ಲಿಕಾರ್ಜುನ್‌ನವರು ಇದ್ದರು. ಅಂದು ನಡೆದ ಕಹಿ ಪ್ರಸಂಗಗಳನ್ನೇ ನಾನು ನಿಭಾಯಿಸಿದ್ದೇನೆ. ಇದೇನು ಅಮಟ್ಟದಲ್ಲಿಲ್ಲ. ನಾನು ಮೊನ್ನೆ ತಾನೇ ಪತ್ರಿಕಾ ಸಂದರ್ಶನದಲ್ಲಿ ನಮ್ಮ ಸದಸ್ಯರುಗಳು ಬಹಳ ಒಳ್ಳೆಯವರಾಗಿದ್ದಾರೆ. ಚೆನ್ನಾಗಿ ಕೆಲಸ ಕಲಿಯುತ್ತಿದ್ದಾರೆ ಮತ್ತು ಇನ್ನೂ ಕಲಿಯಬೇಕಾದ ಕೆಲಸಗಳು ಬೇಕಾದಷ್ಟು ಇದೆ ಎಂದು ನಿಮ್ಮನ್ನೆಲ್ಲ ಹೊಗಳಿದ್ದೇನೆ. ಎಲ್ಲರೂ ಪತ್ರಿಕೆಗಳಲ್ಲಿ ನನ್ನ ಅಭಿಪ್ರಾಯಗಳನ್ನು ಓದಿರಬಹುದು. ಈಗಲೂ ಕೂಡ ಅದೇ ಅಭಿಪ್ರಾಯದಲ್ಲಿ ನಾನು ಇದ್ದೇನೆ. ನನ್ನ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ದಯವಿಟ್ಟು ಸದಸ್ಯರುಗಳು ಅವಕಾಶ ಮಾಡಿಕೊಡಬೇಡಿ. ನಿನ್ನೆ ನಡೆದ ಘಟನೆ ಬಗ್ಗೆ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಸಂಸದೀಯ ನಡವಳಿಕೆಗಳಲ್ಲಿ ಸಾಮಾನ್ಯವಾಗಿ ಇಂಥದ್ದು ಆಗಿಂದಾಗ್ಗೆ ಆಗುತ್ತದೆ. ಈಗ ಶೆಟ್ಟರ್‌ರವರು, ಸಿಂಧ್ಯಾರವರು, ಭೈರೇಗೌಡರು ಮತ್ತು ಶ್ರೀಮಾನ್ ಚಂದ್ರೇಗೌಡರು ಏನು ಹೇಳಿದ್ದಾರೋ ಅಂಥ ಕಹಿ ಪ್ರಸಂಗಗಳನ್ನೆಲ್ಲಾ ನೀವೆಲ್ಲರೂ ಮರೆತು ಇನ್ನು ಮುಂದೆ ಸದನದಲ್ಲಿ ಸರಿಯಾಗಿ ನಡೆದುಕೊಂಡು ಹೋಗಬೇಕಾದ್ದು ನಿಮ್ಮ ಕರ್ತವ್ಯವಾಗಿದೆ. ನಿನ್ನೆ ದಿನ ನಾನು ಎದ್ದುನಿಂತು ವಿವರಣೆ ಕೊಡಬೇಕೆಂದುಕೊಂಡರೆ ನನಗೆ ಯಾರೂ ಅದಕ್ಕೆ ಆಸ್ಪದ ಮಾಡಿಕೊಡಲೇ ಇಲ್ಲ. ನಮಗೆ ಎಷ್ಟು ಬೇಜಾರಾಗಿದೆ ಎಂಬುದು ನಿಮಗೆ ಗೊತ್ತೇ? ಇನ್ನು ಮುಂದಾದರೂ ಕೂಡ ಅಧ್ಯಕ್ಷರಾದವರು ಎದ್ದುನಿಂತಾಗ ಅಧ್ಯಕ್ಷರು ಏನು ಹೇಳುತ್ತಾರೆ, ಏತಕ್ಕಾಗಿ ಹೇಳುತ್ತಾರೆ ಎಂಬುದನ್ನು ಎಲ್ಲಾ ಸದಸ್ಯರು ಕುಳಿತು ಸಂಯಮದಿಂದ ಮೊದಲು ಕೇಳುವ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಈಗಾಗಲೇ ಶಾಸನಸಭೆಯ ಎಲ್ಲಾ ಸದಸ್ಯರು ಒಳ್ಳೆಯವರು ಎನ್ನುವ ಅಭಿಪ್ರಾಯವನ್ನು ಪತ್ರಿಕಾ ಸಂದರ್ಶನದಲ್ಲಿ ಹೇಳಿರುವುದನ್ನು ಎಲ್ಲರೂ ಓದಿದ್ದೀರಿ, ಅದನ್ನು ಪರಿಪಾಲಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ :- ಅಧ್ಯಕ್ಷರೇ, ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡುವಾಗ ಒಮ್ಮೊಮ್ಮೆ ಇಂಥ ಪ್ರಸಂಗಗಳು ಆದಾಗ ಅಧ್ಯಕ್ಷರನ್ನೂ ಕೂಡ ಕೇಳುವುದಿಲ್ಲ ಹಾಗೆ ನಡೆಯುತ್ತದೆ ಎಂದು ಹೇಳಿದರು. ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು:- ನನ್ನ ಅಭಿಪ್ರಾಯದಲ್ಲಿ ನಾನು ಹೇಳುವುದಿಷ್ಟೆ. ಕರ್ನಾಟಕ ವಿಧಾನಸಭೆ ಅಖಿಲ ಭಾರತ ಮಟ್ಟದಲ್ಲಿ ಮೊದಲ ಸ್ಥಾನವನ್ನೇ ಪಡೆಯಬೇಕು ಎಂಬುದೇ ನನ್ನ ಆಶಯವಾಗಿದೆ. ಅದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯವಿದೆ. ನಿನ್ನೆ ನಡೆದ ಪ್ರಸಂಗವನ್ನು ಎಲ್ಲರೂ ಮರೆತು ಬಿಡೋಣ.

ಶೆಟ್ಟರ್‌ರವರೂ ಕೂಡ ಮರೆತು ತಮ್ಮ ಪಕ್ಷದ ಸದಸ್ಯರುಗಳನ್ನು ಧರಣಿಯಿಂದ ಹಿಂದೆ ಬಂದು ತಮ್ಮ ತಮ್ಮ ಸ್ಥಾನಗಳಲ್ಲಿ ಕೂರುವಂತೆ ಹೇಳಬೇಕು. ನಾನು ಎಲ್ಲಾ ಪಕ್ಷದ ಸದಸ್ಯರಿಗೂ ಹೇಳುವುದೇನೆಂದರೆ ನಮ್ಮ ಸಂಸದೀಯ ನಡವಳಿಕೆಗಳಲ್ಲಿ ರೂಲ್ಸ್ ಆಫ್ ಪ್ರೊಸೀಜರ್ ಎಂದು ಮಾಡಿದ್ದೇವೆ.

ಈ ಸಂಸದೀಯ ನಡವಳಿಕೆಗಳಲ್ಲೆ ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಏನಿದೆ, ನಮ್ಮ ನಡವಳಿಕೆ ಯಾವರೀತಿ ಇದೆ. ಆದರ ಪ್ರಕಾರ ನಡೆದುಕೊಂಡು ಬಿಟ್ಟರೆ, ಖಂಡಿತ ನಾವು ಅಖಿಲಭಾರತ ಮಟ್ಟದಲ್ಲೆ ನಮ್ಮ ಶಾಸನಸಭೆಯನ್ನು ಮೇಲಿನ ಸ್ಥಾನದಲ್ಲೆ ನಿಲ್ಲಿಸುವುದಕ್ಕೆ ಪ್ರಯತ್ನ ಪಡೋಣ. ಅದಕ್ಕೆ ನೀವು ಪ್ರಯತ್ನ ಪಡುತ್ತೀರಿ ಎಂದು ಹೇಳುತ್ತಾ, ನಿನ್ನೆ ಆಡಳಿತ ಪಕ್ಷದ ಸದಸ್ಯರು ಸಹ ಸ್ವಲ್ಪ ಆವೇಶದಲ್ಲೆ ಬಂದಿದ್ದಾರೆ. ಅವರೂ ಸಹ ಸ್ವಲ್ಪ ತಿದ್ದಿಕೊಳ್ಳಬೇಕು.

ಶ್ರೀ ಬಿ.ಎನ್ ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ತಪ್ಪು ಮಾಡಿದ್ದಾರೆ ಎಂದು ಹೇಳಿ.

ಒಬ್ಬ ಮಾನ್ಯ ಸದಸ್ಯರು:- ನಾವುರೈತರ ಪರವಾಗಿ ಬಂದಿದ್ದೇವೆ. ನಾವು ತಪ್ಪು ಮಾಡಿಲ್ಲವಲ್ಲ.

ಅಧ್ಯಕ್ಷರು:- ಜಗದೀಶ್ ಶೆಟ್ಟರ್‌ರವರೇ ತಮ್ಮ ಸದಸ್ಯರಿಗೆ ದಯವಿಟ್ಟು ಹೇಳಿ. ಕಾರ್ಯಕಲಾಪ ಪ್ರಾರಂಭ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಚಂದ್ರೇಗೌಡರು, ಹಿರಿಯರಾದಂತಹ ಸಿಂಧ್ಯರವರು ಹಾಗೂ ಮಾನ್ಯ ಬೈರೇಗೌಡರು, ತಾವು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ. ಆದರೆ ನಿನ್ನೆನಡೆದಂತಹ ಘಟನಾವಳಿಗಳನ್ನು ನೋಡಿದರೆ ನಮ್ಮ ಮನಸ್ಸಿಗೆ ತುಂಬಾ ಖೇದವೆನಿಸುತ್ತದೆ. ಮಾನ್ಯ ಅಧ್ಯಕ್ಷರೆ ತಮ್ಮ ಅಭಿಪ್ರಾಯವನ್ನು ತಾವು ಹೊರಗೆ ಹಾಕಿದ್ದೀರಿ. ಆದೇನೆಂದರೆ ಅವರು ತಪ್ಪು ಮಾಡಿದ್ದಾರೆ ಎನ್ನುವ ಭಾವನೆಯನ್ನು ವ್ಯಕ್ತ ಮಾಡಿದಿರಿ. It is not a ruling. It is only a request from me.

ನಿಮ್ಮ ನಾಯಕರು ಮಾತನಾಡುವಾಗ ಮಾನ್ಯ ಸದಸ್ಯರುಗಳು ಏಕೆ ಮಧ್ಯದಲ್ಲೆ ಮಾತನಾಡುತ್ತೀರಿ ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಸಂಸದೀಯ ಸಚಿವರಾದ ಚಂದ್ರೇಗೌಡರು ಕೆಲವೊಂದು ವಿಚಾರಗಳನ್ನು ಹೇಳಿದರು. ಅದೇನೆಂದರೆ ಇಲ್ಲೆ ಬಾವಿಯಲ್ಲೆ ಬಂದು ಬೇಳುವಂತಾದ್ದು ಪುಸ್ತಕದಲ್ಲೆ ಬರೆದಿಲ್ಲ ಎಂದು. ಯಾರು ಇದ್ದರೂ ನಡೆಯುತ್ತದೆ ಯಾರು ಹೋದರೂ ನಡೆಯುತ್ತದೆ ಎಂದೆಲ್ಲಾ ಮಾತನಾಡಿದರು. ಬಹುಶಃ ಅವರಿಗೆ ರಾಜಕೀಯದಲ್ಲೆ 30 ವರ್ಷಗಳ ಅನುಭವವಿದೆ. ನನಗೆ ಏನನ್ನಿಸುತ್ತದೆ ಎಂದರೆ ಮಾನ್ಯ ಚಂದ್ರೆ ಗೌಡರು ಯಾವಾಗಲೂ ಕೂಡ ಬಾವಿಯಲ್ಲಿ ಬಂದಿಲ್ಲವೆಂದು ಕಾಣುತ್ತದೆ. ಅವರು ವಿರೋಧ ಪಕ್ಷದ ನಾಯಕರೂ ಆಗಿದ್ದರು. ಅವರು ಬಾವಿಗೆ ಬಂದಿಲ್ಲವೆಂದು ಹೇಳಲಿ. ಏಕೆ ಸುಮ್ಮನೆ ಈ ರೀತಿಯಾಗಿ ಮಾತನಾಡುತ್ತೀರಿ?

ಅವರು ಅಡ್ವೋಕೇಟ ಆಗಿದ್ದವರು He is a good advocate, but arguing on behalf of a bad case. He is arguing, he is defending a bad case ಇರಲಿ, ಇದನ್ನೆಲ್ಲಾ ಜನ ನೋಡುತ್ತಿರುತ್ತಾರೆ.

ಅಧ್ಯಕ್ಷರು:- ನೋಡಿ, ಬ್ಯಾಡ್ ಕೇಸ್ ತೆಗೆದುಕೊಂಡು ಗೆಲ್ಲಬೇಕಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿ ಪ್ರಮುಖವಾಗಿ ನಾವು ಪ್ರಸ್ತಾಪ ಮಾಡುವಂತಾದ್ದು ಕೆಲವು ಮಹತ್ವ ವಿಷಯದ ಬಗ್ಗೆ ಇವತ್ತು ರಾಜ್ಯದಲ್ಲಿ ರೈತ ಏನು ಕಷ್ಟಪಡುತ್ತಿದ್ದಾನೆ ಅದರ ಬಗ್ಗೆ ಚರ್ಚೆಯಾಗಬೇಕೆನ್ನುವುದು ನಮ್ಮ ಅಭಿಪ್ರಾಯ ಇದೆ. ಆದುದರಿಂದ ಇದರ ಬಗ್ಗೆ ಹೆಚ್ಚಿಗೆ ಚರ್ಚೆಗೆ ಬೆಳೆಸುವುದಕ್ಕೆ ನಮಗೆ ಇಚ್ಛೆ ಇಲ್ಲ. ಇದರ ಬಗ್ಗೆ ಜನತೆ ಉತ್ತರ ಕೊಡುತ್ತಾರೆ. ಇವರು ಏನು ತಪ್ಪು ಮಾಡಿದ್ದಾರೆ, ಏನು ಕೆಲಸ ಮಾಡುತ್ತಿದ್ದಾರೆ, ಇವರ ನಡಾವಳಿ ಇದಕ್ಕೆಲ್ಲಾ ಜನತೆ ಉತ್ತರ ಕೊಡುತ್ತಾರೆ. ಇವತ್ತು ಇಡೀ ರಾಜ್ಯದಿಂದ ಜನ ಇಲ್ಲಿಗೆ ಬಂದಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಅಭಯ ಚಂದ್ರರವರೆ ಅವರು ಮಾತನಾಡುವ ತನಕ ಸುಮ್ಮನಿರಿ.

ಶ್ರೀ ಜಗದೀಶ್ ಶೆಟ್ಟರ್:- ಆದುದರಿಂದ, ಈ ರಾಜ್ಯಸರ್ಕಾರ ಏನುತಪ್ಪು ಮಾಡುತ್ತಿದೆ, ಇವರ ನಡವಳಿಕೆಗಳನ್ನು ಜನ ನೋಡುತ್ತಿದ್ದಾರೆ. ಇಲ್ಲಿ ಇರತಕ್ಕಂಥ ಸದಸ್ಯರ ನಡವಳಿಕೆಗಳನ್ನು ನೋಡುತ್ತಿದ್ದಾರೆ. ಇವತ್ತು ನಮ್ಮ ಬಗ್ಗೆ ಏನು ಚಿಂತನೆ ನಡೆಯುತ್ತಿದೆ ಎನ್ನುವ ಬಗ್ಗೆ ಕೂಡ ನೋಡುತ್ತಿದ್ದಾರೆ. ಮತ್ತು ಈಗಾಗಲೇ ಕಾರ್ನಾಟಕ ರಾಜ್ಯದ ರಾಜಧಾನಿಗೆ ಲಕ್ಷಾಂತರ ಜನರು ಬಂದು ಉತ್ತರ ಕೊಟ್ಟಿದ್ದಾರೆ.

(ಗೊಂದಲ)

ಅದಕ್ಕಾಗಿ ನಾನುನಮ್ಮ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:- ವಿರೋಧ ಪಕ್ಷದ ನಾಯಕರು ಸದಸ್ಯರಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದಾರೆ ಕೇಳಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ನಿನ್ನೆ ಅವರ ನಡವಳಿಕೆ ಬಗ್ಗೆ ಕ್ಷಮಾಪಣೆ ಕೇಳಬೇಕಾಗಿತ್ತು. ಆದರೆ ಅದಕ್ಕೆ ಜನ ಉತ್ತರ ಕೊಡುತ್ತಾರೆ. ಕ್ಷಮಾಪಣೆ ಕೇಳುತ್ತಾರೋ ಇಲ್ಲವೋ ಅದಕ್ಕೆ ಜನ ಉತ್ತರ ಕೊಡುತ್ತಾರೆ. ಆದರೆ ಈ ಸದನದಲ್ಲಿ ಈ ಒಂದು ವಿಚಾರದ ಬಗ್ಗೆ ಚರ್ಚೆಯಾಗಬೇಕು, ಈ ಒಂದು ಜ್ವಲಂತ ಸಮಸ್ಯೆ ಬಗ್ಗೆ ಚರ್ಚೆಯಾಗಲೇಬೇಕು ಎನ್ನುವ ಸದುದ್ದೇಶದಿಂದ ಇವತ್ತು ನಮ್ಮ ಶಾಸಕ ಮಿತ್ರರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಎಲ್ಲರೂ ತಮ್ಮ ತಮ್ಮ ಆಸನದಲ್ಲಿ ಕುಳಿತುಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ನಾಯಕರಿಗೆ ಮತ್ತು ಇತರ ಸದಸ್ಯರಿಗೆ ಸಹಾ ವಂದನೆಗಳು.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಂಡರು)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಈಗ ನಾನು ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು:- ಇಲ್ಲೆ ಒಂದು ಪ್ರಶ್ನೆ ಏನೆಂದರೆ ಐದು ಜನ ಸದಸ್ಯರು ನಿಲುವಳಿ ಸೂಚನೆ ಬಗ್ಗೆ ಕೊಟ್ಟಿದ್ದಾರೆ. ಕಾಲ್ ಅಂಡ್ ಶಕ್ಟರ್ ರೂಲ್ಸ್ ಪ್ರಕಾರ ಎಷ್ಟೇ ಜನ ಕೊಟ್ಟಿರಲಿ, ಮೂರು ಜನ ಮಾತ್ರ ಕನ್ಸೆಂಟ್‌ಗೋಸ್ಕರ ವಾದ ಮಾಡಬೇಕು. ಅದಕ್ಕೆ 20 ಜನ ರುಜು ಮಾಡಿದರೂ ಕೂಡ ಮೂರು ಜನಕ್ಕೆ ಮಾತ್ರ ನಾವು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿಲುವಳಿ ಸೂಚನೆ ಬಗ್ಗೆ ಕಾಲ್ ಅಂಡ್ ಶಕ್ಡರ್ ಪ್ರಕಾರ ಇರುವುದು ಮೂರು ಜನ ಮಾತ್ರ ಮಾತನಾಡಬೇಕೆನ್ನುವುದು ನಿಜ. ಅದು ಪ್ರಿಲಿಮಿನರಿ ಸಬ್‌ಮಿಷನ್ ನಿಚಾರದಲ್ಲೆ ಬರುತ್ತದೆ.

ಅಧ್ಯಕ್ಷರು:- ನಾನು ಪ್ರಿಲಿಮಿನರಿ ಸಬ್‌ಮಿಷನ್ ವಿಚಾರದಲ್ಲೇ ಹೇಳುತ್ತಿರುವುದು.

ಶ್ರೀ ಪಿ.ಜಿ. ಆರ್. ಸಿಂಧ್ಯ:- ಮೂರುಜನ ಮಾತನಾಡುತ್ತೇವೆ. ಆದರೆ ಆದಾದನಂತರ ನಾವು ತಮ್ಮ ಮನಸ್ಸನ್ನು ಒಲಿಸುತ್ತೇನೆ. ತಾವು ರೈತರ ಮಕ್ಕಳಿದ್ದೀರಿ. ತಮಗೆ ರೈತರ ಸಮಸ್ಯೆ ಏನಿದೆ ಎನ್ನುವುದು ಗೊತ್ತಿದೆ. ಅದರಿಂದ ಆ ಕಡೆಯ ಸದಸ್ಯರುಗಳು ಸಹ ಮಾತನಾಡುವವರು ಇದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ಇದರ ಬಗ್ಗೆ ದೇಶದಲ್ಲೆ, ರಾಜ್ಯದಲ್ಲೆ ಮತ್ತು ಈ ಸದನದಲ್ಲೆ ಚರ್ಚೆಯಾಗಬೇಕು. ಕಳೆದ ಬಾರಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ, ದಯವಿಟ್ಟು ಮೂರು ದಿನದ ಅಧಿವೇಶನ ಕರೆಯಿರಿ ಡಬ್ಲೂಟಿಓ ಬಗ್ಗೆ ಚರ್ಚೆ ಮಾಡೋಣ. ಇವತ್ತು ದೇಶದಲ್ಲೆ ರೈತರಿಗೆ ಬಹಳ ತೊಂದರೆ ಇದೆ ಎಂದು ಹೇಳಿದ್ದೆ. ಆದಾದನಂತರ ಮತ್ತೊಂದು ವಿಚಾರ ಡಬ್ಲ್ಯೂಟಿಓ ನಿಂದ ಹೊರಗಡೆ ಬರುವುದಕ್ಕೆ ಒಂದು ರೆಸಲ್ಯೂಷನ್ ಮಾಡೋಣವೆಂದು ಕೂಡ ಹೇಳಿದ್ದೆ. ಆದರೆ ಅದುಯಾವುದೂ ಆಗಲಿಲ್ಲ.

ಅಧ್ಯಕ್ಷರು:- ಡಬ್ಲ್ಯೂಟಿಓ ವಿಚಾರದಲ್ಲೆ ಮೂರು ದಿನದ ಚರ್ಚೆ ಮಾಡುವುದಕ್ಕೆ ಮುಖ್ಯಮಂತ್ರಿಯವರು ನನಗೆ ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಮಂತ್ರಿಗಳು ಇದ್ದಾರೆ, ನನಗೆ ಏನೂ ಹೇಳಲಿಲ್ಲ. ಆದುದರಿಂದ ನಿಮ್ಮಲ್ಲೆ ನನ್ನ ಮನವಿ ಏನೆಂದರೆ ಅನೇಕ ಜನ ಸದಸ್ಯರು ಈ ವಿಚಾರದಲ್ಲೆ ದೀರ್ಘವಾದ ಚರ್ಚೆಯಾಗಬೇಕೆಂದು ಇದ್ದಾರೆ. ಆದುದರಿಂದ, ಅದರ ಸಂಖ್ಯೆಯನ್ನು ಇಡುವುದಕ್ಕೆ ಹೋಗಬೇಡಿ. ನಾನು ತಮ್ಮನ್ನು ಸೇರಿಸಿಕೊಂಡು ಹೇಳುತ್ತಿದ್ದೇನೆ. ಇಲ್ಲ ಎಂದು ಹೇಳಬೇಡಿ. ನಾನು ಹೇಳುತ್ತಿರುವುದು ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಗೆ ತಾವು ದಯಮಾಡಿ ಅವಕಾಶ ಮಾಡಿಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ):- ಮಾನ್ಯ ಅಧ್ಯಕ್ಷರೆ, ತಾವು ನಿನ್ನೆ ಬೆಳಿಗ್ಗೆ ತಡವಾಗಿ ಏಕೆ ಬಂದುದ್ದೆಂದು ಹೇಳಲೇ ಇಲ್ಲ.

ಅಧ್ಯಕ್ಷರು:- ನಾನು ನಿನ್ನೆ ಬೆಳಿಗ್ಗೆ 20 ನಿಮಿಷ ತಡವಾಗಿ ಬಂದಿದ್ದು, ಏಕೆಂದರೆ ಇದೇ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರು, ನಾವು ಎಲ್ಲಾ ಕುಳಿತುಕೊಂಡು ಮಾತನಾಡುತ್ತಿದ್ದೆವು. ಅದಕ್ಕಾಗಿ ತಡವಾಯಿತು ಹೊರತು ಬೇರೆ ಕಾರಣದಿಂದ ಅಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಆದರೆ ನಿಮಗೆ ಆಡಳಿತ ಪಕ್ಷದವರು ಹೇಳುವುದಕ್ಕೆ ಬಿಡಲೇ ಇಲ್ಲ.

ಅಧ್ಯಕ್ಷರು:- ಆಯಿತು ಬಿಡಿ. ನೀವು ಈಗ ಈ ವಿಷಯದ ಬಗ್ಗೆ ಪುನಃ ಪ್ರಚೋದನೆ ಮಾಡುತ್ತಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಿನ್ನೆ ಹಾಗೂ ಇವತ್ತು ಮಾನ್ಯ ಸದಸ್ಯರುಗಳು ಏನು ಪ್ರಶ್ನೆಗಳನ್ನು ಕೇಳಿದ್ದಾರೆ, ಅದಕ್ಕೆ ಒಂದು ಪದ್ಧತಿಯನ್ನು ತಾವು ಕಾಣಿಸಬೇಕು. ಅದನ್ನು ಇಲ್ಲೆ ಮಂಡನೆ ಮಾಡಿದರೆ ಆಗುವುದಿಲ್ಲ. ಏಕೆಂದರೆ ಸದಸ್ಯರುಗಳು ಹಲವಾರು ಪ್ರಶ್ನೆಗಳನ್ನು ಕೇಳಿದ್ದಾರೆ, ಅದಕ್ಕೆ ಒಂದು ಪದ್ಧತಿಯನ್ನು ತಾವು ಕಾಣಿಸಬೇಕು. ಅದನ್ನು ಇಲ್ಲೆ ಮಂಡನೆ ಮಾಡಿದರೆ ಆಗುವುದಿಲ್ಲ. ಏಕೆಂದರೆ ಸದಸ್ಯರುಗಳು ಹಲವಾರು ಪ್ರಶ್ನೆಗಳನ್ನು ಕೇಳಿದ್ದಾರೆ. ಮಾನ್ಯ ಶಿವಪ್ಪನವರು ಅವರದೇ 48 ಪ್ರಶ್ನೆಗಳು ಇವೆ ಎಂದು ಹೇಳಿದರು. ಆ 48 ಪ್ರಶ್ನೆಗಳನ್ನು ಕಳುಹಿಸುವುದಕ್ಕೆ ಅವರು ಎಷ್ಟು ಶ್ರಮ ತೆಗೆದುಕೊಂಡಿದ್ದಾರೆ. ಮತ್ತು ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಜನ ಕೇಳುತ್ತಾರೆ. ನೀವು ಏನು ಮಾಡುತ್ತಿದ್ದೀರಿ ಏಕೆ ಪ್ರಶ್ನೆಯನ್ನು ಕೇಳಿಲ್ಲವೆಂದು. ಆದುದರಿಂದ ಆ ಪ್ರಶ್ನೆಗಳನ್ನು ಬೇರೆ ದಿನದಲ್ಲೆ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

MR. SPEAKER : I will place it before the BAC meeting.

ಶ್ರೀ ಪಿ.ಜಿ.ಆರ್.ಸಿಂಧ್ಯ :- ಬಿಎಸಿ ಮುಂದೆ ಇಡುವುದಕ್ಕೆ ಏನಿದೆ ? ಅದರಲ್ಲೆ ಧರಣಿ ಮಾಡುವುದರ ಬಗ್ಗೆ ಇದೆಯಾ? ಇದರ ಬಗ್ಗೆ ತಾವು ಒಂದು ತೀರ್ಮಾನ ತೆಗೆದುಕೊಳ್ಳಬೇಕು ಇದು ನನ್ನ ಮನವಿ, ನಾನು ಗೌರವಾನ್ವಿತ ಸದಸ್ಯರ ಪರವಾಗಿ ಕೇಳುತ್ತಿದ್ದೇನೆ.

ಅಧ್ಯಕ್ಷರು:- ದಯವಿಟ್ಟು ನಿಲುವಳಿ ಸೂಚನೆ ಬಗ್ಗೆ ಬಂದಾಗ ಇಲ್ಲೆ ರೂಲ್ಸ್ ಏನಿದೆ ಅದನ್ನು ಓದಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ಇದಕ್ಕೆ ತಾವು ರೂಲ್ಸ್ ತೋರಿಸುತ್ತೀರಿ ತಮಗೆ ಡಿಸ್ಕ್ರಿಷನರಿ ಪವರ್ ಇದೆ. ಅಧ್ಯಕ್ಷರಿಗೆ ಅಧಿಕಾರ ಇದೆ.

MR.SPEAKER :- Please hear me. We will try our level best to accommodate.

SRI P.G.R. SINDHIA:-There is no question of trying.ಅದನ್ನು ಹೆಬ್ಡ್ ಓವರ ಮಾಡಿ ಇನ್ನೊಂದು ದಿವಸ ಇಟ್ಟುಕೊಳ್ಳೋಣ ಎಂದು ಹೇಳಿ.

ಅಧ್ಯಕ್ಷರು:- ಸರಿ, ನಿಮ್ಮ ವಿಚಾರವನ್ನು ಹೆಚ್ಚು ಕಡಿಮೆ ಒಪ್ಪಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ಇವತ್ತು ಮತ್ತು ನಿನ್ನೆಯ ಪ್ರಶ್ನೆಗಳನ್ನು ತಡೆಹಿಡಿದಿದ್ದೇನೆ., ಇನ್ನೊಂದು ದಿವಸ ತೆಗೆದುಕೊಳ್ಳೋಣ ಎಂದು ಹೇಳಿ.

SRI D.B. CHANDRE GOWDA:- Once it is placed on the table of the House, it becomes the property of the house. How can we revive? It is already placed on the table of the House.

MR.SPEAKER :- We will take a decision ವಿರೋಧ ಪಕ್ಷದ ನಾಯಕರು, ನಾವು ಕುಳಿತುಕೊಂಡು ಇದರ ಬಗ್ಗೆ ವಿಚಾರ ಮಾಡೋಣ. ಪಾಸಿಟೀವ್ ಆಗಿ ತೆಗೆದುಕೊಳ್ಳೋಣ. positively we will take a desicion.

ಶ್ರೀ ಕೆ.ಜಯಪ್ರಕಾಶ್ ಹೆಗಡೆ:- ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ಈ ವಿಧಾನಸಭೆ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂದೆ ಕೊಟ್ಟಂತಹ ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ. ನಾವು ಪ್ರಶ್ನೆಗಳನ್ನು ಕೊಟ್ಟು ಅವರು ಉತ್ತರಗಳನ್ನು ಈ ಸದನ ಪ್ರಾರಂಭವಾಗುವುದಕ್ಕೆ ಮೊದಲು ಕೊಡುವುದಕ್ಕೆ ಸಮಯ ಇಲ್ಲದೆ ಇದ್ದರೆ ನಾವು ಏಕೆ ಪ್ರಶ್ನೆಗಳನ್ನು ಕೊಡಬೇಕು? ಈ ಚುಕ್ಕೆ ಪ್ರಶ್ನೆಗಳನ್ನು ಸದನ ನಡೆಯುವಾಗ ಕೇಳಿದರೆ ಅದಕ್ಕೆ ಉತ್ತರವನ್ನು ಕೊಡದೇ ಇದ್ದರೆ ನಾವು ಏಕೆ ಪ್ರಶ್ನೆಗಳನ್ನು ಕೊಡಬೇಕು? ಈ ಚುಕ್ಕೆ ಪ್ರಶ್ನೆಗಳನ್ನು ಸದನ ನಡೆಯುವಾಗ ಕೇಳಿದರೆ ಅದಕ್ಕೆ ಉತ್ತರವನ್ನು ಕೊಡದೇ ಇದ್ದರೆ ತಾವು ವರ್ಷವಿಡೀ ಅವಕಾಶ ಕೊಡುವುದಾದರೇ, ಎರಡು ಪ್ರಶ್ನೆಗಳಿಗೆ ಉತ್ತರವನ್ನು ಮನೆಗೆ ಕಳುಹಿಸುವ ವ್ಯವಸ್ಥೆ ಮಾಡಿ. ಅದಕ್ಕಾದರೂ ಮಾನ್ಯ ಮುಖ್ಯಮಂತ್ರಿಗಳು ಹೇಳಿ. ಆ ಪ್ರಶ್ನೆಗಳಿಗೆ ಉತ್ತರವನ್ನು ಮನೆಗೆ ವ್ಯವಸ್ಥೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟೇ ಕೊಡುತ್ತೇವೆ. ಕೆಲವೊಂದು ಬಾರಿ ಕೆಲವು ಪ್ರಶ್ನೆಗಳಿಗೆ ತತ್‌ಕ್ಷಣ ಉತ್ತರ ಕೊಡುವುದಕ್ಕಾಗುವುದಿಲ್ಲ. ಅದನ್ನು ತಾಲ್ಲೂಕು ಮಟ್ಟ ಅಥವಾ ಜಿಲ್ಲಾ ಮಟ್ಟದಲ್ಲಿ ವಿವರಗಳನ್ನು ತರಿಸಿಕೊಳ್ಳಬೇಕಾಗಿರುತ್ತದೆ. ಆದುದರಿಂದ ನಿಧಾನವಾಗುತ್ತದೆಯೆ ವಿನಃ ನಮ್ಮ ವಿಧಾನ ಸಭೆ ಮಟ್ಟದಲ್ಲಿ ಮಾಹಿತಿ ಸಿಗುವುದಾದರೆ ಅದನ್ನು ಬೇಗ ಪಡೆದುಕೊಂಡು ಉತ್ತರ ಕೊಡುತ್ತೇವೆ.

ಶ್ರೀ ಸಿ.ಚನ್ನಿಗಪ್ಪ:- ಮಾನ್ಯ ಅಧ್ಯಕ್ಷರೆ, ಹೋದ ಸಾರಿ ನಾನು ಪ್ರಸ್ತಾಪ ಮಾಡಿದಂತಹ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು:- ಮಾನ್ಯ ಚನ್ನಿಗಪ್ಪನವರೇ, ನಾನು ನಮ್ಮ ಕಚೇರಿಯಲ್ಲಿ ಡೀಟೈಲ್ಸ್‌ಗಳನ್ನು ತೆಗೆಸಿ ನಿಮಗೆ ನಾಳೆ ಹೇಳುತ್ತೇನೆ. ಕಳೆದ ಸಾರಿ ನಡೆದಂತಹ ಅಧಿವೇಶನದಲ್ಲಿ ಇದ್ದಂತಹ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೋ, ಇಲ್ಲವೊ ಏನು, ಎಷ್ಟು ಎಂಬುದನ್ನು ನಾನು ನಾಳೆ ಹೇಳುತ್ತೇನೆ. ಆ ರೀತಿ ಏನಾದರೂ ಕಳುಹಿಸಿಲ್ಲದೇ ನಿಂತು ಹೋಗಿದೆಯೋ, ಅಥವಾ ಟಪಾಲುಗಳನ್ನು ಶಾಸಕರುಗಳಿಗೆ ಕಳುಹಿಸಿಕೊಟ್ಟಿದ್ದಾರೋ ಎಂಬುದನ್ನು ನಾನು ವೆರಿಫೈ ಮಾಡುತ್ತೇನೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ :- ಮಾನ್ಯ ಅಧ್ಯಕ್ಷರೆ, ಕಳೆದ ಸಾರಿ ಅಧಿವೇಶನದಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ರೈಟ್ ಟು ಇನ್‌ಫರ್‌ಮೇಷನ್ ಎಂದು ಬಿಲ್ ಪಾಸ್ ಮಾಡಿದ್ದೆವು. ಇದು ಈ ವ್ಯಾಪ್ತಿಯಲ್ಲಿ ಬರುತ್ತದೊ, ಇಲ್ಲವೊ, ಎಂಬ ಪ್ರಶ್ನೆಯನ್ನು ಕೇಳಿದ್ದೆ, ಆದರೂ ಸಹಿತ ನೀವು ಮಾಡಿದಂತಹ ಕಾನೂನನ್ನು ನೀವೇ ಉಲ್ಲಂಘನೆ ಮಾಡುತ್ತಿದ್ದೀರಾ, ಶಾಸಕರು ಯಾರು ಏನೇ ಕೇಳಿದರೂ ಅವರಿಗೆ ಹದಿನೈದು ದಿವಸಗಳಲ್ಲಿ ಇನ್‌ಫರ್ಮೇಷನ್ ಕೊಡಬೇಕೆಂದು ಇದೆ ಆದರೆ ಅದನ್ನು ಕೊಡುತ್ತಿಲ್ಲ.

ಅಧ್ಯಕ್ಷರು:- ಮಾನ್ಯ ಮಲ್ಲಿಕಾರ್ಜುನರವರೆ, ಒಬ್ಬೊಬ್ಬರು ಅವರವರ ಪ್ರಶ್ನೆ ಬಗ್ಗೆ ಕೇಳುತ್ತಾ ಹೋದರೆ ಆಗುವುದಿಲ್ಲ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ :- ಮಾನ್ಯ ಅಧ್ಯಕ್ಷರೇ, ಅದು ಜಾರಿಗೆ ಬರುವವರೆಗೂ ಉತ್ತರವನು ಕೊಡುವುದಿಲ್ಲವೆಂದಾದರೂ ಒಪ್ಪಿಕೊಳ್ಳಲಿ, ಮಾನ್ಯ ಕಾನೂನು ಸಚಿವರು ಜಾರಿಗೆ ಬಂದಿಲ್ಲವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು:- ತಾವು ಪ್ರಶ್ನೆಯ ಬಗ್ಗೆ ಕೇಳುವುದಿದ್ದರೆ ದಯಮಾಡಿ ನನ್ನ ಕಚೇರಿಗೆ ಬನ್ನಿ, ನನ್ನನ್ನು ಕೇಳಿ, ಇಲ್ಲಿ ನಿಮಗೆ ಇರುವಷ್ಟು ಹಕ್ಕು ಎಲ್ಲರಿಗು ಇದೆ. ಇಲ್ಲಿ ಎಲ್ಲಾ ಸದಸ್ಯರುಗಳು ನನ್ನ ಪ್ರಶ್ನೆ ಏನಾಯಿತು, ನನ್ನ ಪ್ರಶ್ನೆ ಏನಾಯಿತು? ಎಂದು ಕೇಳುತ್ತಾ ಹೋದರೆ ಹೆಚ್ಚು ಸಮಯವಿಲ್ಲ. ಆದುದರಿಂದ, ನಮ್ಮ ಸಚಿವಾಲಯಕ್ಕೆ ಬಂದು ಕೇಳಿ ನಾವು ಹೇಳುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಗಳನ್ನು ಕೇಳುವಂಥಾದ್ದು ನಮ್ಮ ತೃಪ್ತಿಗಾಗಿ ಅಲ್ಲ, ನಮ್ಮ ಕ್ಷೇತ್ರದ ತೃಪ್ತಿಗಾಗಿಯೂ ಅಲ್ಲ. ನಾನು ಪ್ರಶ್ನೆಗಳಿಗೆ ಏಕೆ ಉತ್ತರ ಬರಲಿಲ್ಲವೆಂದು ಅಧಿಕಾರಿಗಳನ್ನು ಕೇಳಿದರೆ ಅವರು ಉತ್ತರವನ್ನು ಕೊಡುವುದಕ್ಕೆ ಹಿಂದು ಮುಂದು ನೋಡುತ್ತಾರೆ.

ಅಧ್ಯಕ್ಷರು:- ಮಾನ್ಯ ಶಿವಪ್ಪನವರೇ, ಈಗ ಆ ಡೀಟೈಲ್, ಎಲ್ಲಾ ಬೇಡಿ, ನಿಮ್ಮ ಪ್ರಶ್ನೆಗಳು ಏನಾದರು ಬಾಕಿ ಇದ್ದರೆ, ನನ್ನ ಹತ್ತಿರ ಬನ್ನಿ, ನಾನು ನಿಮ್ಮ ಸಮಸ್ಯೆಯನ್ನು ಸಾಲ್ವ್ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸ ಗೌಡ :- ಮಾನ್ಯ ಅಧ್ಯಕ್ಷರೆ, ಈಗ ಕಂಪ್ಯೂಟರ್ ಯುಗವಾಗಿದೆ, ನಾನ್ಯ ಮಂತ್ರಿಗಳಿಗೂ ಏನು ತೊಂದರೆಗಳಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಮಾತೆತ್ತಿದರೆ ಕಂಪ್ಯೂಟರೀಕರಣ ಮಾಡಿದ್ದೇವೆಂದು ಹೇಳುತ್ತಿರುತ್ತಾರೆ.

ಈ ಮಾಹಿತಿಗಳು ಇನ್ನು ಕಂಪ್ಯೂಟರೀಕರಣವಾಗಿಲ್ಲವೆಂದು ಒಪ್ಪಿಕೊಳ್ಳಲಿ. ಇವರು ಸುಮ್ಮನೆ ಹೈಟೆಕ್ ಸರ್ಕಾರವೆಂದು ಏಕೆ ಹೇಳಬೇಕು. ಇವರು ಇವತ್ತು ಎಲ್ಲಾ ಕಡೆ ಕಂಪ್ಯೂಟರೀಕರಣ ಮಾಡಿದ್ದೇವೆಂದು ಹೇಳುತ್ತಾರೆ.

MR.SPEAKER :- Mr. Chandrashekar, you are the Minister for Information. You should get the information.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೇ, ತಾವು ಈಗ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರನ್ನು ಮಾತನಾಡುವುದಕ್ಕೆ ಕರೆದಿದ್ದೀರಿ. ಅವರು ಸಭೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಾವು ಇಲ್ಲಿಗೆ ಸದಸ್ಯರಾಗಿ ಆಯ್ಕೆಯಾಗಿ ಬಂದಿರುವಂಥಾದ್ದು ಎರಡನೇ ಬಾರಿ, ನಾನು ಮೊದಲನೆಯ ಬಾರಿ ಶಾಸಕನಾಗಿ ಆಯ್ಕೆಯಾದಂತಹ ಸಂದರ್ಭದಲ್ಲಿ ಅನೇಕ ಹಿರಿಯ ಸದಸ್ಯರುಗಳು ಮಾತನಾಡುವುದನ್ನು ಕೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಸಭಾ ನಾಯಕರು ಸಭೆಯಲ್ಲಿ ಇರಬೇಕೆಂದರೆ ಇದು ಆ ಸ್ಥಾನದ ಮಹತ್ವ ಆ ರೀತಿ ಇದೆ, ಅಥವಾ ನಮ್ಮ ಸದನದ ಘನತೆ ಗೌರವ, ರೀತಿನೀತಿ ಆ ರೀತಿ ಇದೆ. ಅವರೇ ಈ ಸಭೆಯಲ್ಲಿರಬೇಕೆಂದು ಇದೆ, ಇಲ್ಲಿ ನಾವು ಮಂತ್ರಿಗಳ ಸಾಲುಗಳನ್ನು ನೋಡಿದರೆ, ಅವರು ಬೇರೆ ತೊಂದರೆಯಿಂದ ಸಭೆಗೆ ಬರುವುದಕ್ಕೆ ಸಾಧ್ಯವಾಗದೇ ಇರಬಹುದು. ಆದರೆ ನಮ್ಮ ಕೃಷಿ ಸಚಿವರು ಇಲ್ಲಿ ಇಲ್ಲವೆಂದರೆ ಹೇಗೆ? ಇನ್ನು ಆಹಾರ ಮಂತ್ರಿಗಳು ದೆಹಲಿಗೆ ಹೋದವರು ಬಂದಿದ್ದಾರೋ, ಇಲ್ಲವೋ ಗೊತ್ತಾಗಲಿಲ್ಲ.

MR.SPEAKER :- I will verify whether the Agriculture Minister is busy in the Legislative Council. If he is available, I will see that he is here.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಆಹಾರ ಮಂತ್ರಿಯವರು ದೆಹಲಿಗೆ ಹೋಗಿದ್ದವರು ಬಂದಿದ್ದಾರೋ ಇಲ್ಲವೊ, ಗೊತ್ತಾಗಲಿಲ್ಲ.

(ಗೊಂದಲ)

ಶ್ರೀ ಬಿ.ಸೋಮಶೇಖರ್ :- ಮಾನ್ಯ ಅಧ್ಯಕ್ಷರೇ, ನಮಗೆ ಸರ್ಕಾರದಿಂದ ಒಂದು ಕ್ಲಾರಿಫಿಕೇಶನ್ ಬೇಕಾಗಿದೆ. ಹೋದ ಸಾರಿ ರೈಟ್ ಟು ಇನ್‌ಫರ್‌ಮೇಷನ್ ಬಿಲ್ ಈ ಸದನದಲ್ಲಿಟ್ಟಾಗ ಅನೇಕ ಸದಸ್ಯರು ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿದರು.

MR.SPEAKER :- You are deviating the subject here.

ಶ್ರೀ ಬಿ.ಸೋಮಶೇಖರ್ :- ನನಗೆ ಸರ್ಕಾರದಿಂದ ಕ್ಲಾರಿಫಿಕೇಷನ್ ಬೇಕು.

ಅಧ್ಯಕ್ಷರು:- ತಾವು ಬರವಣಿಗೆಯಲ್ಲಿ ಕಳುಹಿಸಿ ಕೊಡಿ.

ಶ್ರೀ ಬಿ.ಸೋಮಶೇಖರ್ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಶ್ನೆಗಳನ್ನು ಕೇಳಿದಾಗ, ಅದಕ್ಕೆ ಉತ್ತರ ಕೊಡದಿದ್ದರೆ ಅವರಿಗೆ ಏನಾದರೂ ದಂಡ ಹಾಕುವಂತಹ ಅವಕಾಶಗಳು ಇದೆಯಾ? ಆ ಬಗ್ಗೆ ನನಗೆ ಕ್ಲಾರಿಫಿಕೇಶನ್ ಬೇಕಾಗಿದೆ. ಅದು ಈ ವ್ಯಾಪ್ತಿಯನ್ನು ಬಿಟ್ಟು ಹೋಗಿದೆಯಾ?

ಅಧ್ಯಕ್ಷರು:- ಆ ವಿಷಯವನ್ನು ತಾವು ದಯಮಾಡಿ ಬರೆದು ಕಳುಹಿಸಿ.Not at this stage.

SRI B.SOMASHEKAR : Is it excluding the Legislators?

ಅಧ್ಯಕ್ಷರು :- ತಾವು ಬರವಣಿಗೆಯಲ್ಲಿ ಕಳುಹಿಸಿ, ಅದನ್ನು ಬೇರೆ ಇಷ್ಯೂನಲ್ಲಿ ತೆಗೆದುಕೊಳ್ಳೋಣ.

ಶ್ರೀ ಬಿ.ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಸಭೆಯಲ್ಲಿ ಮಾನ್ಯ ವಾರ್ತಾ ಸಚಿವರು ಇದ್ದಾರೆ. ಇದು ಈ ವ್ಯಾಪ್ತಿಯಲ್ಲಿ ಬರುತ್ತದೋ, ಇಲ್ಲವೋ ಎಂದು ಹೇಳಲಿ.

ಅಧ್ಯಕ್ಷರು:- ನೀವು ನನಗೆ ವಿಷಯ ಏನು ಹೇಳದೆ, ಸಭೆಯಲ್ಲಿ ಸಡನ್ ಆಗಿ ಪ್ರಸ್ತಾಪ ಮಾಡಿಬಿಟ್ಟರೆ ಹೇಗೆ? ತಾವು ಬರೆದು ಕಳುಹಿಸಿ ನಾನು ಆಲೋ ಮಾಡುತ್ತೇನೆ.

ಶ್ರೀ ಬಿ.ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ಸಭೆಯಲ್ಲಿ ಮಾನ್ಯ ವಾರ್ತಾ ಸಚಿವರು ಇದ್ದಾರೆ, ಅವರು ಹೇಳಲಿ.

ಅಧ್ಯಕ್ಷರು:- ನೀವು ಈ ರೀತಿ ಹೇಳಿದರೆ, ಇನ್ನೊಬ್ಬರು ಇನ್ನೊಂದು ವಿಷಯವನ್ನು ಕೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಪ್ರಶ್ನೋತ್ತರಗಳನ್ನು ಯಾವಾಗಲಾದರು ತೆಗೆದುಕೊಳ್ಳಿ ಎಂದು ಹೇಳಿದರು. ನನಗೆ ಗೊತ್ತಿರುವ ಹಾಗೆ ಲೋಕಸಭೆಯಲ್ಲಿ ಪ್ರಶ್ನೋತ್ತರಗಳನ್ನು ಆದಿವಸ ತೆಗೆದುಕೊಳ್ಳದೇ ಹೋದರೆ it is deemed to have been placed on the Table of the House. ಅದನ್ನು ಆಗಲೇ ಟೇಬಲ್ ಮೇಲೆ ಇಟ್ಟು ಬಿಟ್ಟಿದ್ದೇವೆ. ಆದರೆ ಇಲ್ಲಿ ಒಂದು ಅವಕಾಶವಿದೆ, ನಮ್ಮ ರೂಲ್ಸ್‌ನಲ್ಲಿ ಮಾಡಿಕೊಂಡಿದ್ದೇವೆ. ಅದನ್ನು ಇನ್ನು ಯಾವಾಗಲಾದರೂ ತೆಗೆದುಕೊಳ್ಳುವುದಕ್ಕೆ ತಾವು ಒಪ್ಪಿಗೆ ಕೊಡುವುದಾದರೆ ತೆಗೆದುಕೊಳ್ಳಬಹುದು. But not after laying on the Table of the House. ಸದನದ ಮುಂದೆ ಇಟ್ಟಮೇಲೆ ಪುನಃ ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು:- ಮಾನ್ಯ ಚಂದ್ರೇಗೌಡರೇ, ಮೊನ್ನೆಯ ದಿವಸದ್ದು ಇಟ್ಟಿಲ್ಲ, ನಿನ್ನೆ ದಿವಸ ಉತ್ತರಗಳನ್ನು ಡಿಸ್ಟ್ರಿಬ್ಯೂಟ್ ಮಾಡಿ ಬಿಟ್ಟಿದ್ದಾರೆ, ಅದು ಸಭೆ ನಡೆಯುತ್ತದೆಂದು ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಯವರು ನಿನ್ನೆಯ ದಿವಸದ ವಿಚಾರವನ್ನು ಹೇಳುತ್ತಿರುವಂಥಾದ್ದು ಸರಿಯಾಗಿದೆ. ಅದಕ್ಕೋಸ್ಕರವೇ ನಾನು ಹೇಳುತ್ತಿರುವಂಥಾದ್ದು ಕೊನೆ ಪಕ್ಷ ನಿನ್ನೆ ದಿವಸದ್ದು ಟೇಬಲ್ ಮೇಲೆ ಇಟ್ಟುಬಿಟ್ಟಿದ್ದೀರಿ, ಅದನ್ನು ಬಿಟ್ಟು ಬಿಡಿ, ನಾಳೆಯದನ್ನಾದರು ತಡೆ ಹಿಡಿಯಿರಿ.